# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038

Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:204 Issue:204 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 07.01.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸಮಸ್ತ ರೈತರಿಗೆ ದಸರ ಹಾಗೂ ದೀಪಾವಳಿ ಹಬ್ಬಕ್ಕೆ ಸಹಕಾರ ನಿಡಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು

MASSEY FERGUSON
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
TAFE










*ಟಿ.ಪಿ., ಇನ್ಸುರೆನ್ಸ್, ರಿಜಿಸ್ಟ್ರೇಶನ್ ಉಚಿತ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ-583239.
RRR GROUP
ಮೊ : 9980127607, 7353306719
*ಷರತ್ತುಗಳು ಅನ್ವಯಿಸುತ್ತವೆ

ರೈತರ ಕೋರಿಕೆಯ ಮೇರೆಗೆ ಈ ಸ್ಕೀಂ ಇನ್ನೂ 25 ಗ್ರಾಹಕರಿಗೆ ಮಾತ್ರ ವಿಸ್ತರಿಸಲಾಗುವುದು (ಮೊದಲು ಬಂದವರಿಗೆ ಆದ್ಯತೆ)


# ನಗರಸಭೆ ನಿರ್ಲಕ್ಷ್ಯಕ್ಕೆ ಜನ ಆಸ್ಪತ್ರೆ ಪಾಲು

## ಅಧಿಕಾರಿಗಳ ನಿರ್ಲಕ್ಷ್ಯ, ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಗೆ ಜನರ ಆಕ್ರೋಶ | ಹಣ ಖರ್ಚಾದರೂ ಜನರಿಗಿಲ್ಲ ಶುದ್ಧನೀರು

■ **ಹಂಪಿ ಟೈಮ್ಸ್ ಹೊಸಪೇಟೆ**

ಇಲ್ಲಿನ ನಗರಸಭೆ ಶತಮಾನೋತ್ಸವ ಆಚರಿಸಿಕೊಂಡರೂ ಇಂದಿಗೂ ನಗರಸಭೆ ವ್ಯಾಪ್ತಿಯ ಜನರಿಗೆ ಪರಿಶುದ್ಧ ಕುಡಿಯುವ ನೀರು ಪೂರೈಕೆ ಮಾಡುವಲ್ಲಿ ಎಡವುತ್ತಿದೆ. ನಗರದ ಕಾರಿಗನೂರು ಪ್ರದೇಶ ಶಿಕಾರಿ ಕ್ಯಾಂಪಿನಲ್ಲಿ ಕೂಲಿ ಕಾರ್ಮಿಕರು ನಗರಸಭೆ ಪೂರೈಸಿದ ಕಲುಷಿತ ನೀರು ಕುಡಿದು 14 ಜನ ವಾಂತಿಭೇದಿಗೆ ತುತ್ತಾಗಿ ನೂರು ಹಾಸಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರೆ, ಅನೇಕರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಂಶಯಾಸ್ಪದ ವಾಂತಿಭೇದಿ ಪ್ರಕರಣದಿಂದ ಒರ್ವ ವ್ಯಕ್ತಿ ನಿಧನರಾಗಿದ್ದಾರೆ.

ನಗರಸಭೆ ವ್ಯಾಪ್ತಿಯ ಕಾರಿಗನೂರಿನ ಶಿಕಾರಿ ಕ್ಯಾಂಪ್‌ನಲ್ಲಿನ ಕೂಲಿಕಾರ್ಮಿಕರಲ್ಲಿ ಶುಕ್ರವಾರ ಮತ್ತು ಶನಿವಾರ ವಾಂತಿ, ಬೇಧಿ ಕಾಣಿಸಿಕೊಂಡಿದೆ. ಇದ-ರಿಂದ ಆತಂಕಗೊಂಡ ಕುಟುಂಬಸ್ಥರು ನಗರದ ಸರ್ಕಾರಿ 100 ಹಾಸಿಗೆ ಆಸ್ಪತ್ರೆಗೆ ದಾಖಲಿಸಿದ್ದಾರೆ. ಶುಕ್ರವಾರ 8 ಜನರು ಹಾಗೂ ಶನಿವಾರ 6 ಜನರು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅಸ್ವಸ್ಥರಲ್ಲಿ ಇಬ್ಬರು ಗುಣಮುಖರಾಗಿ ಬಿಡುಗಡೆಯಾಗಿದ್ದವರ ಪೈಕಿ ಒಬ್ಬರು ಅನಾರೋಗ್ಯದಿಂದ ಮತ್ತೆ ಆಸ್ಪತ್ರೆಗೆ ಮರು ದಾಖಲಾಗಿದ್ದಾರೆ. ಇನ್ನೂ ಕೆಲವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ.

ಅಸ್ವಸ್ಥರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಇಲಾಖೆಯಿಂದ ಶಿಕಾರಿ ಕ್ಯಾಂಪ್‌ನ ಸರ್ಕಾರಿ ಉರ್ದು ಶಾಲೆಯಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರವನ್ನು ಆರಂಭಿಸಲಾಗಿದೆ. ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ್ ನೇತೃತ್ವದಲ್ಲಿ ಆರೋಗ್ಯ ಇಲಾಖೆ ಸಹಾಯಕರು, ಆಶಾ ಕಾರ್ಯಕರ್ತೆಯರು ಮನೆ ಮನೆ ಸಮೀಕ್ಷೆ ನಡೆಸಿ ಜಾಗೃತಿ ಮೂಡಿಸುತ್ತಿದ್ದಾರೆ. ಆರೋಗ್ಯದಲ್ಲಿ ಏರು ಪೇರು, ವಾಂತಿ- ಭೇದಿ ಹಾಗೂ ಜ್ವರದ ಲಕ್ಷಣವುಳ್ಳವರನ್ನು ಗುರುತಿಸಿ, ತಾತ್ಕಾಲಿಕ ಚಿಕಿತ್ಸಾ ಕೇಂದ್ರಕ್ಕೆ ಕರೆತಂದು ಚಿಕಿತ್ಸೆ ಕೊಡಿಸುತ್ತಿದ್ದಾರೆ. ಆರೋಗ್ಯದಲ್ಲಿ ತೀವ್ರ ಏರು, ಪೇರು ಹಾಗೂ ನಿತ್ರಾಣಗೊಂಡವರನ್ನು ಸರ್ಕಾರಿ 100 ಬೆಡ್ ಆಸ್ಪತ್ರೆಗೆ ರವಾನಿಸಲಾಗುತ್ತಿದೆ. ಆರೋಗ್ಯ ಇಲಾಖೆಯ ಅವಿರತ ಶ್ರಮದಿಂದಾಗಿ ಸದ್ಯಕ್ಕೆ ಪರಿಸ್ಥಿತಿ ಹತೋಟಿಗೆ ಬಂದಿದೆ.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ್ ನಾಯ್ಕ, ತಾಲೂಕು ವೈದ್ಯಾಧಿಕಾರಿ ಡಾ.ಭಾಸ್ಕರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊಡ್ಡಮನಿ, ಆರೋಗ್ಯ ನಿರೀಕ್ಷಕ ಡಾ.ಎಂ. ಧರ್ಮನಗೌಡ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಜನರ ಆತಂಕವನ್ನು ದೂರಾಗಿಸುತ್ತಿದ್ದಾರೆ.













ಶುದ್ಧೀಕರಣ ಘಟಕದ ದುರಸ್ತಿ ನಿಮಿತ್ತ ಎರಡು ದಿನ ನೀರು ಪೂರೈಸಿರಲಿಲ್ಲ. ಜನರು ಬೋರ್‌ವೆಲ್ ಮತ್ತಿತರೆ ನೀರು ಕುಡಿದಿದ್ದರಿಂದ ಅಸ್ವಸ್ಥರಾಗಿರಬಹುದು. ಘಟನೆ ಬಳಿಕ ಟ್ಯಾಂಕರ್ ಮೂಲಕ ನೀರು ಪೂರೈಸಲು ಸೂಚಿಸಿದ್ದೇನೆ. ಶನಿವಾರ ಸಂಜೆ 4 ಗಂಟೆಗೆ ಕ್ಲೋರಿನ್ ಪೂರೈಕೆಯಾಗಿದ್ದು, ನೀರು ಶುದ್ಧೀಕರಿಸಲಾಗುತ್ತಿದೆ. ಶಿಕಾರಿ ಕ್ಯಾಂಪ್‌ನ ನಿವಾಸಿಯೊಬ್ಬರು ಕಲುಷಿತ ನೀರು ಕುಡಿದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂಬುದು ಸುಳ್ಳು. 20 ವರ್ಷದಿಂದ ಆತ ವಿಪರೀತ ಮದ್ಯ ವ್ಯಸನಿಯಾಗಿದ್ದರಿಂದ ಸಾವನ್ನಪ್ಪಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ. ಹೀಗಾಗಿ ಘಟನೆಗೂ ಸಾವಿಗೂ ಸಂಬಂಧವಿಲ್ಲ ಎಂದು ಪೌರಾಯುಕ್ತ ಬಿ.ಟಿ.ಬಂಡಿವಡ್ಡರ್ ತಿಳಿಸಿದ್ದಾರೆ.

### ಶುದ್ಧೀಕರಣ ಘಟಕದಲ್ಲಿ ಕ್ಲೋರಿನ್ ಇಲ್ಲ!

ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಶುದ್ಧೀಕರಣ ಘಟಕಗಳಿಂದ ನಗರದ 15ಕ್ಕೂ ಅಧಿಕ ಟ್ಯಾಂಕ್‌ಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ನೀರು ಪೂರೈಸುವ ಶುದ್ಧೀಕರಣ ಘಟಕ ಅವ್ಯವಸ್ಥೆಯ ಆಗರವಾಗಿದೆ. ಕಳೆದ ಒಂದು ವಾರದಿಂದ ದುರಸ್ತಿ ಕಾರ್ಯ ನಡೆಯುತ್ತಿದ್ದು, ಭಾಗಶಃ ಘಟಕ ಮಾತ್ರ ಶುದ್ಧೀಕರಣದಲ್ಲಿ ತೊಡಗಿದೆ. ಸಾಂಕ್ರಾಮಿಕ ಕಾಯಿಲೆಗಳು ಹೆಚ್ಚಾದಾಗ ಮನೆ ಮನೆಗೆ ತೆರಳಿ ನೀರಿನ ಟ್ಯಾಂಕ್ ಮತ್ತಿತರ ಕಡೆ ಸ್ವಚ್ಛವಾಗಿದೆಯೇ ಇಲ್ಲವೆಂದು ಆಶಾ ಕಾರ್ಯಾಕರ್ತರು, ಆರೋಗ್ಯ ಇಲಾಖೆಯವರು ಕೇಳುವುದು ನೋಡಿದ್ದೀರಿ. ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಜಲಶುದ್ಧಿಘಟಕವನ್ನು ಆರೋಗ್ಯ ಇಲಾಖೆ ಮತ್ತು ನಗರಸಭೆಯ ಆರೋಗ್ಯ ವಿಭಾಗಾಧಿಕಾರಿಗಳ ಕಣ್ಣಿಗೆ ಬಿದ್ದಿಲ್ಲವಾ ಎಂಬ ಪ್ರಶ್ನೆ ಮೂಡದೇ ಇರದು.



ಹೊಸಪೇಟೆ ನಗರಸಭೆ ವ್ಯಾಪ್ತಿಯ ಕಾರಿಗನೂರಿನ 14 ಜನರು ಅಸ್ವಸ್ಥಗೊಂಡಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ನಗರಸಭೆ ನೀರಿನಿಂದ ಈ ಘಟನೆ ನಡೆದಿಲ್ಲವೆನ್ನಲಾಗುತ್ತಿದೆ. ಜತೆಗೆ ಕ್ಲೋರಿನ್ ಗ್ಯಾಸ್ ಕೊರತೆ, ಬ್ಲೀಚಿಂಗ್ ಪೌಡರ್ ಇಲ್ಲದಿರುವ ಬಗ್ಗೆ ಸೂಕ್ತ ತನಿಖೆ ನಡೆಸಲಾಗುವುದು. ನಾಳೆ ಕಾರಿಗನೂರಿಗೆ ಭೇಟಿ ನೀಡಿ, ಪರಿಶೀಲಿಸುತ್ತೇನೆ.

– **ಎಂ.ಎಸ್.ದಿವಾಕರ,** ಜಿಲ್ಲಾಧಿಕಾರಿ.



ಕ್ಲೋರಿನ್ ಗ್ಯಾಸ್, ಬ್ಲೀಚಿಂಗ್ ಪೌಡರ್ ಖಾಲಿಯಾಗಿದ್ದು, ಆಲಂ ದಾಸ್ತಾನು ಹೇಳಿಕೊಳ್ಳುವಷ್ಟಿರಲಿಲ್ಲ. ಇದರಿಂದಾಗಿ ನೀರಿನ ಶುದ್ಧೀಕರಣವಾಗುತ್ತಿಲ್ಲ ಎಂಬುದು ನಾವು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿದಾಗಲೇ ಗೊತ್ತಾಗಿದೆ

– **ಡಾ.ಶಂಕರ್ ನಾಯ್ಕ** ಡಿಎಚ್ಒ

## ಮೈಕ್ರೋ ನ್ಯೂಸ್

### ಜ.16 ಕ್ಕೆ ಕೊಟ್ಟೂರಿನಲ್ಲಿ ಜನತಾದರ್ಶನ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತದಿಂದ ತಾಲ್ಲೂಕು ಮಟ್ಟದ 'ಜನತಾದರ್ಶನ' ಕಾರ್ಯಕ್ರಮವನ್ನು ಜ.16ರಂದು ಬೆಳಿಗ್ಗೆ 10.30ಕ್ಕೆ ಕೊಟ್ಟೂರು ತಾಲ್ಲೂಕಿನ ಪಟ್ಟಣ ಪಂಚಾಯತಿ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿ ವಾಕರ ತಿಳಿಸಿದ್ದಾರೆ.

ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಪರಿಹಾರ ಕೈಗೊಳ್ಳುವ ನಿಟ್ಟಿನಲ್ಲಿ ಸಂಬಂಧಿಸಿದ ಚುನಾಯಿತ ಪ್ರತಿನಿಧಿಗಳು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯಲಿರುವ ತಾಲ್ಲೂಕು ಮಟ್ಟದ ಜನತಾದರ್ಶನ ಕಾರ್ಯಕ್ರಮದಲ್ಲಿ ಕೊಟ್ಟೂರು ತಾಲ್ಲೂಕಿನ ಸಾರ್ವಜನಿಕರು ತಮ್ಮ ಅಹವಾಲುಗಳೊಂದಿಗೆ ಹಾಜರಾಗಬೇಕು.

### ಜ.10ರಿಂದ ಲೋಕಾಯುಕ್ತಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಜ.10ರಿಂದ ಲೋಕಾಯುಕ್ತ ಜನಸಂಪರ್ಕ ಸಭೆಯನ್ನು ವಿವಿಧ ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಹಡಗಲಿ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಜ.10ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ, ಹಗರಿಬೊಮ್ಮನಹಳ್ಳಿ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜ.19ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಹೊಸಪೇಟೆ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜ.23ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ನಡೆಯುವ ಲೋಕಾಯುಕ್ತ ಜನ ಸಂಪರ್ಕ ಸಭೆಯಲ್ಲಿ ಆಯಾ ತಾಲ್ಲೂಕಿನ ಸಾರ್ವಜನಿಕರು ಭಾಗವಹಿಸಿ ಸರ್ಕಾರಿ ಸೇವೆ ಅಥವಾ ಕೆಲಸಗಳಿಗೆ ಸಂಬಂಧಿಸಿದ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬ, ಕಿರುಕುಳ, ತೊಂದರೆ ಅಥವಾ ಅಧಿಕಾರಿ/ಸಿಬ್ಬಂದಿ ದುರಾಡಳಿತಕ್ಕೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ.

# ವಿವಿ ಸಂಶೋಧನೆಗಳು ಸಾರ್ವಜನಿಕರ ಆಸ್ತಿ

## ಶಾಸಕ ಎಚ್. ಆರ್. ಗವಿಯಪ್ಪ ಅವರು ಅಭಿಮತ | ಕನ್ನಡ ವಿವಿಯಲ್ಲಿ ವಿದ್ಯಾರ್ಥಿಗಳ ಸೌಲಭ್ಯ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಂಶೋಧನಾರ್ಥಿಗಳು ನಡೆಸುವ ಸಂಶೋಧನೆಗಳು ಕೇವಲ ವಿಶ್ವವಿದ್ಯಾಲಯಕ್ಕೆ ಸೀಮಿತವಾಗದೆ, ಅವು ಜನಸಾಮಾನ್ಯರಿಗೆ ಮುಟ್ಟಬೇಕು. ಪ್ರಮುಖವಾಗಿ ಪಿಎಚ್.ಡಿ ಮಹಾಪ್ರಬಂಧಗಳು ಸಾರ್ವಜನಿಕರ ಸ್ವತ್ತು ಎಂದು ಶಾಸಕ ಎಚ್. ಆರ್. ಗವಿಯಪ್ಪ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಗ್ರಂಥಾಲಯದ ಆವರಣದಲ್ಲಿ ತಾಂತ್ರಿಕ ವಿಭಾಗದಿಂದ ಆಯೋಜಿಸಿದ್ದ ವಿದ್ಯಾರ್ಥಿಗಳ ಸೌಲಭ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಎಂ.ಪಿ ಪ್ರಕಾಶ್ ಸೇರಿದಂತೆ ಅನೇಕ ಮಹನೀಯರು ಹೋರಾಟ ನಡೆಸಿದ್ದಾರೆ. ಪ್ರಮುಖವಾಗಿ ಎಂ.ಪಿ ಪ್ರಕಾಶ್ ಅವರು ಕನ್ನಡ ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ ಹಾಗೂ ಜಾನಪದ ಆಸಕ್ತಿಯ ಅಂಶಗಳೊಂದಿಗೆ ಕನ್ನಡ ವಿಶ್ವವಿದ್ಯಾಲಯವನ್ನು ಬಹಳ ವಿಶಿಷ್ಟವಾಗಿ ಆರಂಭಿಸಲು ಕಾರಣೀಭೂತರಾಗಿದ್ದಾರೆ. ಇಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ನಡೆಯುವಂತಹ ಸಂಶೋಧನೆಗಳು ಇನ್ನು ಮುಂದೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶನಕ್ಕೆ ಅನುವು ಮಾಡಿಕೊಡಬೇಕು ಹಾಗಾದರೆ ಮಾತ್ರ ವಿದ್ಯಾರ್ಥಿ ಹಾಗೂ ಸಮುದಾಯಗಳಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಇನ್ನು ವಿಜಯನಗರ ಕ್ಷೇತ್ರವು ಪ್ರವಾಸಿ ತಾಣವಾಗಿರುವುದರಿಂದ ಪ್ರತಿನಿತ್ಯ ಐದರಿಂದ ಹತ್ತು ಸಾವಿರ ಪ್ರವಾಸಿಗರು ಬಂದೇ ಬರುತ್ತಾರೆ. ಕನ್ನಡ ವಿಶ್ವವಿದ್ಯಾಲಯ ನಾಡಿನ ಅಸ್ಮಿತೆಗಾಗಿ ನಡೆಸುತ್ತಿರುವ ಸಂಶೋಧನೆಗಳು ಪ್ರವಾಸಿಗರಿಗೆ ಲಭ್ಯವಾಗುವ ರೀತಿಯಲ್ಲಿ ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಮುಖ್ಯವಾಗಿ ನನಗೆ ಕನ್ನಡ ವಿಶ್ವವಿದ್ಯಾಲಯದ ಅಡಿಗಲ್ಲಿನಿಂದ ಇಲ್ಲಿಯವರೆಗೆ 33 ವರ್ಷಗಳ ಅವಿನಾಭಾವ ಸಂಬಂಧವಿದೆ, ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಅಕ್ಷರ ಗ್ರಂಥಾಲಯವನ್ನು ಹೆಚ್ಚೆಚ್ಚು ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳ ಜೊತೆ ಸಂವಾದ ನಡೆಸಿ ಕುಂದು ಕೊರತೆಗಳನ್ನು ಆಲಿಸಿ, ನಂತರ ಮಾತನಾಡಿದ ಅವರು ನಮ್ಮ ಸರ್ಕಾರ ಜನಪರವಾಗಿದ್ದು, ಪ್ರತಿ ವಾರ ಸಂಪುಟ ಸಭೆಯನ್ನು ನಡೆಸಿ ರಾಜ್ಯದಲ್ಲಿರುವ ಸಮಸ್ಯೆಗಳನ್ನ ಖುದ್ದಾಗಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳು ಅವುಗಳನ್ನ ಸೂಕ್ತವಾಗಿ ಪರಿಹರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಉಂಟಾಗಿರುವ ಆರ್ಥಿಕ ಸಂಕಷ್ಟವನ್ನು ಸದ್ಯದಲ್ಲೇ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.



ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತಾ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ನಿರಾಸೆಗೊಳ್ಳುತ್ತಿದ್ದಾರೆ. ಆದ್ದ-ರಿಂದ ವಿದ್ಯಾರ್ಥಿಗಳು ಕೌಶಲ್ಯ ಆಧಾರಿತ ಶಿಕ್ಷಣವನ್ನು ಪಡೆದುಕೊಂಡು ಪಠ್ಯಕ್ರಮದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕು ಎಂದರು. ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಅಕ್ಷರ >>4

## ಒಳ ಪುಟಗಳಲ್ಲಿ


**ನೆನಪಿರಲಿ ನೀವು ಮಕ್ಕಳೊಂದಿಗೆ ಒಡನಾಡುತ್ತಿದ್ದಿರಿ- ವ್ಯವಹರಿಸುತ್ತಿಲ್ಲ...!**
– ಜಿ. ಶಿವಕುಮಾರ್ ಸೋಗಿ,
ಪುಟ 3 ರಲ್ಲಿ ಓದಿ

**ಚೈತನ್ಯ ಸ್ವರೂಪಿ ಕನ್ನಡ ವಿಶ್ವವಿದ್ಯಾಲಯ**
– ಎಂ.ಎಂ.ಶಿವಪ್ರಕಾಶ
ಪುಟ 2 ರಲ್ಲಿ ಓದಿ

**ಕಾರ್ಗಿಲ್ ವನಿತೆ ಗುಂಜನ್ ಸಕ್ಸೇನಾ**
– ವೀಣಾ ಹೇಮಂತಗೌಡ ಪಾಟೀಲ್,
ಪುಟ 3 ರಲ್ಲಿ ಓದಿ

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಈ ಸಲದ ಹಂಪಿ ಉತ್ಸವದಲ್ಲಿ ನಡೆಯದಿರಲಿ ಅಚಾತುರ್ಯಗಳು




ಹಂಪಿಯಲ್ಲಿ ಫೆಬ್ರವರಿ 2, 3 ಮತ್ತು 4ರಂದು ಹಂಪಿ ಉತ್ಸವ ಆಚರಣೆಗೆ ಸರ್ಕಾರ ಮುಂದಾಗಿದೆ. ಇದು ಸಂತೋಷದ ವಿಷಯವೇ ಸರಿ. ಅಚ್ಚರಿ ವಿಷಯವೆಂದರೆ ಬರಗಾಲದ ನಡುವೆಯೂ ಹಂಪಿ ಉತ್ಸವಕ್ಕೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ.ಸರಳವಾಗಿಯಾದರೂ ಉತ್ಸವವನ್ನು ನಿರಂತರ ನಡೆಸಿಕೊಂಡು ಬರಬೇಕು. ಈಗಾಗಲೇ ವಿಜಯನಗರ ಜಿಲ್ಲಾಡಳಿತವು ಹಂಪಿ ಉತ್ಸವ ಸಂಬಂಧ ಸಿದ್ಧತೆಗಳನ್ನು ಆರಂಭಿಸಿದೆ. ಹಂಪಿ ಉತ್ಸವ ನೋಡಲು ಬರುವ ವೀಕ್ಷಕರಿಗೆ ಕುಡಿವ ನೀರು, ನೆರಳು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ತಾತ್ಸಾರ ಬೇಡ ಮತ್ತು ಅರೆಬರೆ ಕೆಲಸಗಳಾಗುವುದೂ ಬೇಡ. ಉತ್ಸವಗಳೆಂದರೆ ಅದೊಂದು ಸಾರ್ವತ್ರಿಕ ಹಬ್ಬ. ಬದುಕಿನ ಒತ್ತಡದಲ್ಲಿ ಕಳೆದು ಹೋಗಿರುವ ನಾಗರಿಕರು ಮೂರು ದಿನಗಳ ಕಾಲ ಮನಸ್ಸನ್ನು ರೀ–ಫ್ರೆಷ್ ಮಾಡಿಕೊಳ್ಳಲು ಈ ಉತ್ಸವಗಳು ಸಹಕಾರಿ. ಹಂಪಿ ಉತ್ಸವವೆಂದರೆ ಅದೊಂದು ಸಾಂಸ್ಕೃತಿಕ ಸಮ್ಮಿಲನ ಎಂದೇ ವ್ಯಾಖ್ಯಾನಿಸಬಹುದು. ಇದು ಕಲಾವಿದರೆಗ ಮೂರು ದಿನಗಳ ಕಾಲ ತಮ್ಮ ಪ್ರತಿಭೆ ಅನಾವರಣಗೊಳಿಸಲು ಒಂದು ವೇದಿಕೆ. ಈ ಕಲಾವೈಭವವನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಜನರು ಹಂಪಿಗೆ ಭೇಟಿ ನೀಡುತ್ತಾರೆ. ಮೇಲಾಗಿ ಹಂಪಿ ಉತ್ಸವವೆಂದರೆ ಕೇವಲ ಕಲಾವಿದರಿಗಷ್ಟೇ ಅಲ್ಲ. ಉತ್ಸವದಲ್ಲಿ ವ್ಯಾಪಾರ ವಹಿವಾಟು ಸಹ ನಡೆಯುತ್ತದೆ. ಅವರೂ ಉತ್ಸವ ನೆಪದಲ್ಲಿ ಒಂದಷ್ಟು ಸಂಪಾದನೆ ಮಾಡಿಕೊಳ್ಳುತ್ತಾರೆ. ಕುಟುಂಬದೊಂದಿಗೆ ಉತ್ಸವ ಕಣ್ತುಂಬಿಕೊಳ್ಳಲು ಬರುವ ಜನರಿಗೂ ಉತ್ಸವವೆಂಬುದು ರಿಲಾಕ್ಸ್ ಮೂಡ್‌ನಂತೆ. ವಿಶ್ವದಲ್ಲಿ ಅದ್ಭುತ ಎನಿಸಿರುವ ಹಂಪಿಯ ಶಿಲಾಮಂಟಪಗಳು, ಸ್ಮಾರಕಗಳು, ಬೆಟ್ಟಗಳು ಎಂಥ ನೋಡುಗರ ಮನಸ್ಸನ್ನು ತಣಿಸುತ್ತದೆ. ಇಂಥ ಪ್ರಾಕೃತಿಕ ಸೌಂದರ್ಯದ ನಡುವೆ ಹಂಪಿ ಉತ್ಸವ ನಡೆದರೆ ಅದನ್ನು ನೋಡುವ ಮನಸ್ಸು ಉಲ್ಲಸಿತ ಆಗದೆ ಇರದು.ಹಂಪಿ ಉತ್ಸವ ಜನರ ಉತ್ಸವವಾಗಿ ಆಚರಣೆ ಮಾಡಬೇಕು. ಕಳೆದ ಬಾರಿ ಜನವರಿ ತಿಂಗಳಲ್ಲಿ ನಡೆದ ಹಂಪಿ ಉತ್ಸವದ ಮೊದಲ ದಿನ ಜನರೇ ಸೇರಿರಲಿಲ್ಲ. ಅತಿಯಾದ ಬಿಗುವಿನ ಕ್ರಮದಿಂದ ಈ ಅಚಾತುರ್ಯ ನಡೆದಿತ್ತು. ವಿಜಯನಗರ ನಗರ ಜಿಲ್ಲಾಡಳಿತ ಈ ಬಾರಿ ಇಂಥ ಅಚಾತುರ್ಯಗಳಿಗೆ ಅವಕಾಶ ನೀಡದಿರಲಿ. ಹಿಂದೆ ಆದಂತ ತಪ್ಪುಗಳಿಗೆ ಈ ಬಾರಿ ಅವಕಾಶ ನೀಡದಿರಲಿ. ಕಲಾವಿದರು, ಗಣ್ಯರು, ಅತಿಥಿಗಳು ಮತ್ತು ಜನಸಾಮಾನ್ಯರಿಗೆ ತೊಂದರೆ ಆಗದಂತೆ ಹಂಪಿ ಉತ್ಸವಕ್ಕಾಗೇ ರೂಪುರೇಷೆಗಳನ್ನು ಸಿದ್ಧಪಡಿಸಬೇಕು. ಮೂರೂ ದಿನಗಳ ಕಾಲ ಹೆಚ್ಚೆಚ್ಚು ಜನರು ಹಂಪಿ ಉತ್ಸವದಲ್ಲಿ ಪಾಲ್ಗೊಳ್ಳುವಂತಾಗಬೇಕು. ಒಂದು ವಾರಗಳ ಕಾಲ ಬೆಳಕು ಮತ್ತು ಧ್ವನಿ ಕಾರ್ಯಕ್ರಮ ಈ ಬಾರಿಯೂ ನಡೆಯುವಂತಾಗಬೇಕು. ಇದರಲ್ಲಿ ಒಂದು ಬೇಸರದ ಸಂಗತಿಯೆಂದರೆ ಸರ್ಕಾರವು ಹಂಪಿ ಉತ್ಸವವನ್ನು ನಿಗದಿತ ಸಮಯದಲ್ಲಿ ನಡೆಸದೆ ಇರುವುದು. ಮೈಸೂರು ದಸರಾ ಉತ್ಸವವನ್ನು ಹೇಗೆ ನಿಗದಿತ ಸಮಯದಲ್ಲಿ ಆಚರಣೆ ಮಾಡಲಾಗುತ್ತದೆಯೋ ಅದೇ ರೀತಿಯಾಗಿ ಹಂಪಿ ಉತ್ಸವವನ್ನೂ ಆಚರಿಸಬೇಕು. ಈ ಕುರಿತಾಗಿ ಸರ್ಕಾರ ದಿಟ್ಟ ನಿರ್ಧಾರ ಕೈಗೊಳ್ಳಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

### ಕನ್ನಡ ವಿಶ್ವವಿದ್ಯಾಲಯದ ನುಡಿ ಹಬ್ಬ 32

# ಚೈತನ್ಯ ಸ್ವರೂಪಿ ಕನ್ನಡ ವಿಶ್ವವಿದ್ಯಾಲಯ





ಹಂಪಿ ಒಳನೋಟ

ಎಂ.ಎಂ.ಶಿವಪ್ರಕಾಶ
ಹೊಸಪೇಟೆ

ಕನ್ನಡಿಗರಿಗೆ ಪ್ರಿಯವಾದದ್ದು ಹಾಗೂ ಚೈತನ್ಯ ಸ್ವರೂಪಿಯಾಗಿರುವಂತದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿ. ಇದು ವಿಜಯನಗರದ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ಸ್ಥಾಪಿಸಲ್ಪಟ್ಟಿದೆ.

ಕನ್ನಡ ನಾಡು ನುಡಿ ಸಂಸ್ಕೃತಿ ಪರಂಪರೆಯ ಕುರಿತು ಅಧ್ಯಯನ ಸಂಶೋಧನೆ ಮತ್ತು ಪ್ರಸಾರ ಮಾಡುವ ಮಹತ್ತರ ಹೊಣೆಯನ್ನು ಹೊತ್ತು ಸ್ಥಾಪಿತವಾಗಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿ. ಕಳೆದ 32 ವರ್ಷಗಳಿಂದ ಇದು ಕಾರ್ಯನಿರ್ವಹಿಸುತ್ತಿದೆ .ಕನ್ನಡ ಕನ್ನಡಿಗ ಕರ್ನಾಟಕ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡವಾದದ್ದು. ಕರ್ನಾಟಕವಲ್ಲದೆ ಕನ್ನಡಿಗರು ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ನೆಲ ದೇಶ ವಿದೇಶಗಳನ್ನೊಳಗೊಂಡಿದೆ. ಕನ್ನಡ ವಿಶ್ವವಿದ್ಯಾಲಯದ ಗುರಿ ಮತ್ತು ದಾರಿ ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಕನ್ನಡದ ಜ್ಞಾನ ಪರಂಪರೆಯನ್ನು ಕಟ್ಟುವ ಹಾಗೂ ಅದನ್ನು ವಿಶ್ವ ಜ್ಞಾನ ವಾಗಿಸುವ ಆಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸುವ ಹಾಗೂ ಅದರ ಫಲಿತ ಕನ್ನಡಿಗರೆಲ್ಲರಿಗೂ ದೊರೆಯುವಂತೆ ಮಾಡುವ ಮೂಲಭೂತ ಆಶಯದಲ್ಲಿ ಕನ್ನಡ ವಿಶ್ವವಿದ್ಯಾಲಯವು ಕಾರ್ಯನಿರ್ವಹಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯ ಚಿಂತನೆ ದಾರಿ ಹಾಗೂ ಆದ್ಯತೆಗಳನ್ನು ಚಿಂತನ,ಚರ್ಚೆಗಳ ಮೂಲಕ ಕಂಡುಕೊಂಡು ತನ್ನ ಮುಂದಿನ ದಾರಿಯನ್ನು ಅದು ಸ್ಪಷ್ಟಪಡಿಸಿಕೊಂಡು ಮುನ್ನಡೆಯುತ್ತಿದೆ. ಸಂಸ್ಥಾಪಕ ಕುಲಪತಿಗಳಾಗದ ಡಾ.ಚಂದ್ರಶೇಖರ್ ಕಂಬಾರರು ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಸೃಷ್ಟಿಸುವ ಸಂಸ್ಥೆಯೇ ಹೊರತು, ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ ಎಂದು ತಮ್ಮ ಗುರಿಯನ್ನು ಸ್ಪಷ್ಟಪಡಿಸಿದ್ದರು .ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆ ಗುರಿ ಎಂದರೆ ಶಾಸ್ತ್ರ ವಿಧಾನಗಳ ನಿರ್ಮಾಣ ಈ ಬಗೆಯ ಶಾಸ್ತ್ರ ಸಾಹಿತ್ಯವನ್ನು ಸೃಷ್ಟಿಸುವುದು ವಿಶ್ವವಿದ್ಯಾಲಯದ ಉದ್ದೇಶ ಹಾಗೂ ಕರ್ತವ್ಯವೆಂದು ಅವರು ತಮ್ಮ ಹಿರಿಯ ಕಿರಿಯ ವಿದ್ವಾಂಸರೊಂದಿಗೆ ವಿಶ್ವವಿದ್ಯಾಲಯದ ಕಾರ್ಯವನ್ನು ಪ್ರಾರಂಭಸಿದ್ದರು. ಅಂದಿನಿಂದ ಇಂದಿನವರೆಗೆ ವಿಶ್ವವಿದ್ಯಾಲಯ ಅದೇ ದಾರಿಯಲ್ಲಿ ಮುನ್ನಡೆಯುತ್ತಾ 32ನೇ ವಸಂತಕ್ಕೆ ಬಂದಿದೆ.

ಕನ್ನಡ ವಿಶ್ವವಿದ್ಯಾಲಯ ಭಾಷಾ ನಿಕಾಯ,ಸಮಾಜ ವಿಜ್ಞಾನಗಳ ನಿಕಾಯ, ಲಲಿತ ಕಲೆಗಳನಿಕಾಯ, ವಿಜ್ಞಾನಗಳ ನಿಕಾಯಗಳನ್ನು ಹೊಂದಿ ಇವುಗಳಲ್ಲಿ18ಕ್ಕೂ ಹೆಚ್ಚು ಅಧ್ಯಯನ ವಿಭಾಗಗಳು ಸಂಶೋಧನೆಯಲ್ಲಿ ತೊಡಗಿ ತಮ್ಮ ಸಂಶೋಧನೆ ವಿಧಿ ವಿಧಾನಗಳನ್ನು ಪುನರ್ ಪರಿಶೀಲಿಸಿಕೊಂಡು ವ್ಯಾಖ್ಯಾನಿಸಿ ಅಂತರ್ ಶೀಸ್ತೀಯ ಅಧ್ಯಯನಕ್ಕೆ ಒಳಪಡಿಸಿಕೊಂಡು, ಉಪೇಕ್ಷೆಗೆ ನಿರ್ಲಕ್ಷಕ್ಕೆ ಒಳಗಾಗಿದ್ದ ಅದೆಷ್ಟು ವಿಷಯಗಳನ್ನು ಕೈಗೆತ್ತಿಕೊಂಡು ಸಂಶೋಧನೆ ನಡೆಸಿ ನಾಡಿಗೆ ತನ್ನ ವಿಭಿನ್ನ ದಾರಿಯನ್ನು ತೋರಿಸಿಕೊಟ್ಟಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಬುಡುಕಟ್ಟು ಅಧ್ಯಯನಕ್ಕಾಗಿ ವಿಭಾಗವನ್ನು ಆರಂಭಿಸಿ ಅಲೆಮಾರಿಗಳು ಶೋಷಿತರು ಕುರಿತು ಅಧ್ಯಯನ ಮಾಡಿ ಮೌಖಿಕ ಪರಂಪರೆಯ ಜಾನಪದ, ಬಡಕಟ್ಟು ಮಹಾಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದೆ.

ಕನ್ನಡ ನೆಲದ ದೇಶಿತನವನ್ನು ಹುಡುಕುವ ಅಧ್ಯಯನ ಮಾಡುವ ಕಾರ್ಯವನ್ನು ಕನ್ನಡ ವಿಶ್ವವಿದ್ಯಾಲಯ ನಿರಂತರವಾಗಿ ಸಿಕೊಂಡು ಬಂದಿದೆ.ಶಾಸ್ತ್ರ ಕಲೆ ಮಾರ್ಗ–ದೇಸಿ ಅಭಿವೃದ್ಧಿ ಜಾನಪದ, ದೇಸಿ ವಿದೇಶಿ ಸಂಘರ್ಷಗಳ ಮಧ್ಯೆ ದೇಶಿಯತೆಯನ್ನು ಹಾಗೂ ಅಧ್ಯಯನದಿಂದ ನಿರ್ಲಕ್ಷಿಸಲ್ಪಟ್ಟ ಹಲವಾರು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ಆ ಮೂಲಕ ದೇಶಿಯತೆಯನ್ನು ಮುನ್ನೆಲೆಗೆ ತರುವಲ್ಲಿ ವಿಶ್ವವಿದ್ಯಾಲಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ

ಕನ್ನಡ ವಿಶ್ವವಿದ್ಯಾಲಯ ಪ್ರಾರಂಭಿಸಬೇಕು ಎಂಬ ಸಾಹಿತಿ ಕಲಾವಿದರ ಹೋರಾಟದಂತೆ ಸರಕಾರ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮುಂದಾಯಿತು ಚರ್ಚೆಗಳು ಪ್ರಾರಂಭಗೊಂಡು ಇದನ್ನು ಆಲಿಸಿದ ಅಂದಿನ ಜನತಾ ಸರ್ಕಾರ ವಿಶ್ವವಿದ್ಯಾಲಯದ ಸ್ಥಾಪನೆಯ ರೂಪರೇಷೆಗಳನ್ನು ಕುರಿತು ವರದಿಯನ್ನು ನೀಡಲು ಏಕ ಸದಸ್ಯ ಆಯೋಗವನ್ನು ರಚಿಸಿತು .ಆಗ ಕನ್ನಡ ಸಂಸ್ಕೃತಿ ಸಚಿವರಾಗಿದ್ದ ಎಂಪಿ ಪ್ರಕಾಶ್ ಅವರು

ಶಿಕ್ಷಣ ತಜ್ಞರು ವಿಶ್ರಾಂತ ಕುಲಪತಿಗಳಾಗಿದ್ದ ಡಾ. ಎಸ್ ಎಸ್ ಒಡೆಯರನ್ನು ನೇಮಿಸಿದರು. ಬದಲಾದ ಸರಕಾರದ ಅವಧಿಯಲ್ಲಿ ಅಂದರೆ 23 .10 .1991 ರಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದ ಎಸ್ ಬಂಗಾರಪ್ಪ ಅವರು ಚಂದ್ರಶೇಖರ್ ಕಂಬಾರ್ ಅವರನ್ನು ವಿಶೇಷ ಅಧಿಕಾರಿಯನ್ನಾಗಿ ನೇಮಕ ಮಾಡಿದರು.ಅಂದಿನಿಂದ ಇಲ್ಲಿಯವರೆಗೂ ಕನ್ನಡ ವಿಶ್ವವಿದ್ಯಾಲಯದಲ್ಲಿ ಡಾ.ಚಂದ್ರಶೇಖರ ಕಂಬಾರ., ಡಾ.ಎಂ ಎಂ ಕಲಬುರ್ಗಿ. ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ.ವಿವೇಕ ರೈ, ಡಾ.ಎ.ಮುರಿಗೆಪ್ಪ ಡಾ.ಮಲ್ಲಿಕಾ ಘಂಟಿ , ಡಾ.ಸ.ಚಿ.ರಮೇಶ್ ಅವರು ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಇದೀಗ ಡಾ.ಪರಮಶಿವಮೂರ್ತಿಯವರು ಕುಲಪತಿಗಳಾಗಿ ಬಂದಿದ್ದು, ಇವರ ಸಾರಥ್ಯದಲ್ಲಿ 32ನೇ ನುಡಿ ಹಬ್ಬವನ್ನು ಇದೇ ಜನವರಿ 10ರಂದು ಆಚರಿಸಲಾಗುತ್ತಿದೆ.

## ಅಧ್ಯಯನ –ಸಂಶೋಧನೆ – ಪ್ರಕಟಣೆ

ಕನ್ನಡ ವಿಶ್ವವಿದ್ಯಾಲಯ ಹಂಪಿಯು ಮೂರು ಪ್ರಮುಖ ಅಂಗಗಳಾದ ಅಧ್ಯಯನಾಂಗ, ಪ್ರಸಾರಾಂಗ ಹಾಗೂ ಆಡಳಿತಾಂಗದ ಮೂಲಕ ಕಾರ್ಯನಿರ್ವಹಿಸುತ್ತಿದೆ.ಅಧ್ಯಯನಾಂಗದ ಮೂಲಕ ಅಧ್ಯಯನ, ಸಂಶೋಧನೆ ಕೈಗೊಂಡು ಯೋಜನೆಗಳನ್ನು ನಿರ್ವಹಿಸಲಾಗುತ್ತದೆ. ಈ ಯೋಜನೆಗಳ ಫಲಿತಗಳನ್ನು ಪುಸ್ತಕವಾಗಿ ಪ್ರಸಾರಾಂಗವು ಪ್ರಕಟಿಸುತ್ತಾ ಬಂದಿದೆ. ಇಷ್ಟೇ ಅಲ್ಲ ನಾಡಿನ ಹಿರಿಯ ಕಿರಿಯ ವಿದ್ವಾಂಸರಗಳು ಸಂಸ್ಕೃತಿ ಚಿಂತಕರು ಸಂಶೋಧನೆ ಅಧ್ಯಯನ ವಿಮರ್ಶೆ ಸಂಪುಟಗಳನ್ನು ಸಹ ಪ್ರಸಾರ ಅಂಗವೂ ಪ್ರಕಟಿಸುತ್ತಾ ಬಂದಿದೆ ಬರಿ ಸಂಶೋಧನೆ ವಿಮರ್ಶೆ ವಿದ್ವಾಂಸರಿಗೆ ಅಷ್ಟೇ ಸೀಮಿತವಾಗದೆ ಜನಸಾಮಾನ್ಯರು ವಿದ್ಯಾರ್ಥಿಗಳನ್ನು ಸಹ ಗಮನದಲ್ಲಿರಿಸಿಕೊಂಡು ಹಲವಾರು ಪುಸ್ತಕಗಳನ್ನು ಪ್ರಕಟಿಸುತ್ತಿದೆ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು ಜನಸಾಮಾನ್ಯರಿಗಾಗಿ ಮಂಟಪ ಮಾಲೆ ಮೊದಲಾದ ಮಾಲಿಕೆಗಳಲ್ಲಿ ಕೃತಿಗಳನ್ನು ಪ್ರಕಟಿಸುತ್ತಿದೆ ಸಾಹಿತ್ಯ ಸಂಸ್ಕೃತಿ ಪರಂಪರೆ ಚರಿತ್ರೆ ಪುರಾತತ್ವ ವೈಚಾರಿಕತೆ ಚರಿತ್ರ ಸಂಪುಟಗಳು ವಿಶ್ವಕೋಶಗಳು ಜಾನಪದ ಮಹಾಕಾವ್ಯಗಳು ಕುವೆಂಪು ಸಮಗ್ರ ಸಂಪತ್ತುಗಳು ಜನಪದ ಕಲೆಗಳ ಕೋಶ,ವೈದ್ಯ ವಿಶ್ವಕೋಶ, ಸಮಾಜ ವಿಜ್ಞಾನ, ಬುಡಕಟ್ಟು ಮಹಾಕಾವ್ಯಗಳು ಹೀಗೆ ಹೀಗೆ ಕನ್ನಡ ಭಾಷೆ ಸಾಹಿತ್ಯ ಕಲೆ ಸಂಸ್ಕೃತಿ ಪರಂಪರೆಯನ್ನು ಕುರಿತು ಸುಮಾರು 1500ಕ್ಕೂ ಹೆಚ್ಚು ಪುಸ್ತಕಗಳನ್ನ ಪ್ರಸಾರಂಗವು ಪ್ರಕಟಿಸಿದೆ ಈ ಪುಸ್ತಕಗಳನ್ನು ಓದುಗರ ಜನರ ಮತ್ತು ವ್ಯಾಪಾರಿಗಳ ಅನುಕೂಲಕ್ಕೆ ತಕ್ಕಂತೆ ಅವರ ಮನೆ ಮನಗಳಿಗೆ ತಲುಪಿಸುವ ಕೆಲಸವನ್ನು ಪ್ರಸಾರಂಗವು ಅತ್ಯಂತ ಉತ್ಸಾಹದಿಂದ ನಿರ್ವಹಿಸಿಕೊಂಡು ಬಂದಿದೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯದ ಪ್ರಸಾರಂಗಗಳಿಗಿಂತ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಂಗ ಪ್ರಕಟಣೆ ಮತ್ತು ಮಾರಾಟದ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿದೆ. ಓದುಗರು ವೃತ್ತಿ ಪರ ಮಾರಾಟಗಾರರು ತಾವು ಇದ್ದಲ್ಲಿಂದಲೇ ಪ್ರಸಾರಂಗದ ಪುಸ್ತಕಗಳನ್ನು ಪಡೆಯುವ ವ್ಯವಸ್ಥೆ ಇದೆ. ವಿದ್ಯುನ್ಮಾನ ಮಾಧ್ಯಮಗಳಲ್ಲಿಯು ಪ್ರಸಾರಾಂಗವೂ ಸಕ್ರಿಯವಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ವೆಬ್ಸೈಟ್ನ ಮೂಲಕ ಆಡಿಯೋ ಮೂಲಕ ಪುಸ್ತಕಗಳನ್ನು ಸಹ ಓದಬಹುದಾಗಿದೆ. ಇಂದು ಬಹು ಮುಖ್ಯವಾಗಿ ಜ್ಞಾನ ವಿಕಾಸವಾಗುತ್ತಿದ್ದು ವಿಶೇಷವಾಗಿ ಡಿಜಿಟಲ್ ತಂತ್ರಜ್ಞಾನದ ಮೂಲಕ ವಿಶ್ವಾಸವಾಗಿ ಅರಳಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಪ್ರಸಾರಂಗ ಸಹ ತನ್ನನ್ನು ತಂತ್ರಜ್ಞಾನದ ಮೂಲಕ ಜನರಿಗ . ಎಂಎಂ

ನುಡಿಹಬ್ಬ 32

ಹಂಪಿಯ ಪ್ರದೇಶದಲ್ಲಿ ಉತ್ಸವ ಹಬ್ಬ ಗಳಿಗೆ ವಿಶೇಷವಾದ ಮಹತ್ವ ಇದೆ.ವಿಜಯನಗರ ಪೂರ್ವ ನಂತರದ ಕಾಲಘಟ್ಟದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಉತ್ಸವಗಳು ನಡೆಯುತ್ತಿವೆ. ವಿಜಯನಗರ ಸಾಮ್ರಾಜ್ಯದಲ್ಲಿ ಮಹಾನವಮಿ ಉತ್ಸವ ಅತ್ಯಂತ ಪ್ರಮುಖವಾದ ಉತ್ಸವ.ನಮ್ಮ ಕಾಲಘಟ್ಟದಲ್ಲಿ ಹಂಪಿಯ ಉತ್ಸವ, ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬ ವಿಭಿನ್ನ ಹಾಗು ವಿಶಿಷ್ಟವಾಗಿ ಆಚರಿಸಿಕೊಂಡು ಬರಲಾಗುತ್ತದೆ. ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ವರ್ಷಕ್ಕೊಮ್ಮೆ ಕನ್ನಡದ ಹಬ್ಬವನ್ನು ಪ್ರತಿವರ್ಷ ನವಂಬರ್ ತಿಂಗಳಲ್ಲಿ ನಡೆಸಿಕೊಂಡು ಬರಲಾಗುತ್ತಿತ್ತು ಇದನ್ನು ವಿಶ್ವವಿದ್ಯಾಲಯದ ಪ್ರತಿಷ್ಠಿತ ಉತ್ಸವವಾಗಿ ವರ್ಷಕ್ಕೊಮ್ಮೆ ಆಚರಿಸಲಾಗುತ್ತದೆ .ನುಡಿ ಹಬ್ಬದ ಸಂದರ್ಭದಲ್ಲಿ ಪುಸ್ತಕಗಳ ಬಿಡುಗಡೆ, ವಿಚಾರ ಸಂಕಿರಣ ಹಾಗೂ ಘಟಿಕೋತ್ಸವವನ್ನು ಆಚರಿಸಿಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನವಂಬರ್ ತಿಂಗಳ ನಂತರ ಈ ನುಡಿ ಹಬ್ಬ ನಿಗದಿಯಾಗುತ್ತಿದೆ . ಘಟ್ಟಿಕೋತ್ಸವದ ಸಂದರ್ಭದಲ್ಲಿ ಕನ್ನಡ ನಾಡು– ನುಡಿ, ಸಂಸ್ಕೃತಿ ,ಪರಂಪರೆಗೆ ದುಡಿದವರಿಗೆ ನಾಡೋಜ ಪದವಿಯನ್ನು ನೀಡಿ ಗೌರವಿಸಲಾಗುತ್ತದೆ.ನುಡಿಹಬ್ಬ ಸಾರ್ವಜನಿಕರ ಸಮ್ಮುಖದಲ್ಲಿ ನಡೆಯುತ್ತಿರುವುದರಿಂದ ಇದೊಂದು ವಿಭಿನ್ನವಾದ ಘಟ್ಟಿಕೋತ್ಸವವಾಗಿ ದೇಶೀಯತೆ ಮೆರೆಯುತ್ತಿದೆ. ಈ ಬಾರಿಯ ನುಡಿ ಹಬ್ಬದಲ್ಲಿಮೂರು ಜನ ಗಣ್ಯರಿಗೆ ನಾಡೋಜ ಪದವಿಯನ್ನು ನೀಡಲಾಗುತ್ತಿದೆ.

## ವಿದ್ಯಾರಣ್ಯ ಆವರಣ

ಕನ್ನಡ ವಿಶ್ವವಿದ್ಯಾಲಯವು ವಿಜಯನಗರದ ಹೆಬ್ಬಾಗಿಲು ಎಂದೆ ಕರೆಸಿಕೊಳ್ಳುತ್ತಿರುವ ಕಮಲಾಪುರದ ಹಳ್ಳಿಕೆರೆಯ ಏರಿಯಾದ ಮೇಲೆ ವಿದ್ಯಾರಣ್ಯ ಆವರಣವಿದೆ. ವಿಶಾಲವಾದ ವಿದ್ಯಾರಣ್ಯ ಆವರಣ ಸುಮಾರು 680 ಎಕರೆ ಭೂಮಿಯನ್ನು ಹೊಂದಿದೆ. ವಿಶ್ವವಿದ್ಯಾಲಯದ ಆವರಣದ ಪರಿಸರದಲ್ಲಿ ವೃಕ್ಷ ಸಂಪತ್ತು , ಔಷದಿಯ ಗುಣವುಳ್ಳ ದೇಸಿ ಗಿಡಗಳು ತುಂಬಿವ. ಜೀವಜಾಲದ ವಿವಿಧ ಪ್ರಭೇದ ಹಲವಾರು ಪಕ್ಷಿಗಳು ಚಿಟ್ಟೆಗಳು ಹಾಗೂ ವನ್ಯಜೀವಿಗಳ ತಾಣವಾಗಿದೆ. ಶುದ್ಧ ಗಾಳಿ ಪರಿಸರದಿಂದಾಗಿ ಜೀವಸಂಕುಲ ಇಲ್ಲಿ ನೆಲೆಸಿವೆ. ಈ ಹಸಿರು ಪರಿಸರದ ನಡುವೆ ಹಂಪಿ ವಾಸ್ತುಶಿಲ್ಪದ ಕ್ರಿಯಾಶಕ್ತಿ, ಭವನ ವಿಜಯ, ಮಂಟಪ ಮೊದಲಾದವು ಪರಂಪರಿಕ ಕಟ್ಟಡಗಳನ್ನು ಜ್ಞಾಪಿಸುತ್ತಿವೆ.

**Contact for Advertisements: 9448633038, Email: hampitimes@gmail.com**

**INTHE COURT OF THE CIVIL JUDGE AND J.M.F.C. AT KUDLIGI, Crl. Misc. No.1251/2023**
Between:
1. Smt.Mayamam Daughter of late Gummaiahagala Kariyappa, aged about 56 years,
2. Anandappa Son of late Gummaiahagala Kariyappa, aged about 54 years,
3. Maheshwarappa son of late Gummaiahagala Kariyappa, aged about 50 years,
4. Smt. mahanthamma Daughter of late Gummaiahagala Kariyappa, aged about 46 years,
All are Hindu, Agriculturist, residing at Ganagatte village in Kottur Taluk, Vijayanagra District. …Petitioner And
The Tahasildar Kottur …Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**
Whereas the above petitioners have instituted above petition to get the death certificate of their deceased petitioner Mother by name Boramma wife of late Gummaiahagala Kariyappa was died on 08/06/2012 Ganagatte village in Kottur Taluk, Vijayanagra District. on the file of the civil Judge& JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 08/01/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 16/12/2023

By Order of the court
Chief Ministerial
Officer Civil Judge J.D) Court kudligi

A.M Raghu, Advocate, kudligi

**INTHE COURT OF THE CIVIL JUDGE AND J.M.F.C. AT KUDLIGI, Crl. Misc. No.1252/2023**
Between:
1.Smt.Mayamam Daughter of late Gummaiahagala Kariyappa, aged about 56 years,
2.Anandappa Son of late Gummaiahagala Kariyappa, aged about 54 years,
3.Maheshwarappa son of late Gummaiahagala Kariyappa, aged about 50 years,
4.Smt. mahanthamma Daughter of late Gummaiahagala Kariyappa, aged about 46 years,
All are Hindu, Agriculturist, residing at Ganagatte village in Kottur Taluk, Vijayanagra District.
…Petitioner And
The Tahasildar Kottur . ....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**
Whereas the above petitioners have instituted above petition to get the death certificate of their deceased petitioner Father by name Gummaiahagala Kariyappa son of late Gummaiahagala Basappa was died on 05/03/2012 Ganagatte village in Kottur Taluk, Vijayanagra District. on the file of the civil Judge& JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 08/01/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 16/12/2023

By Order of the court
Chief Ministerial
Officer Civil Judge J.D) Court kudligi

A.M Raghu, Advocate, kudligi

**INTHE COURT OF THE CIVIL JUDGE AND J.M.F.C. AT KUDLIGI, Crl. Misc. No.1286/2023**
Between: 1.Chandya Naik Son of late Kemya naik, aged about 63 years,
2.Shankra Naik Son of late Kemya naik, aged about 60years,
3.Smt.Hiri Bai Daughter of late Kemya naik, aged about 58 years,
4.Dhani Bai D/O of late Kemya naik, aged about 65 years,
All are Hindu, Agriculturist, residing at Thimmalapura Thanda village in Kottur Taluk, Vijayanagra District. .....Petitioner And
The Tahasildar Kottur .....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**
Whereas the above petitioners have instituted above petition to get the death certificate of their deceased petitioner No1&3's Mother the petitioner No.4's Mother in law by name Gobli Bai wife of late Kemya Naik was died on 07/07/2016 Thimmalapura Thanda village in Kottur Taluk, Vijayanagra District. on the file of the civil Judge& JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 16/01/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 28/11/2023

By Order of the court
Chief Ministerial
Officer Civil Judge J.D) Court kudligi

Devaraj Naik.T, Advocate, kudligi

**INTHE COURT OF THE CIVIL JUDGE AND J.M.F.C. AT KUDLIGI, Crl. Misc. No.1269/2023**
Between: 1.Nagya Naik, son of late swami Naik, aged about 69 years, 2.Shankra Naik, son of late swami Naik, aged about 46 years, 3.Smt. Sumangalamma, wife of late Rathna Naik, aged about 77 years, 4.Khethavath Devendra Naik, son of late Rathna Naik, aged about 37 years, 5.K.Lalitha bai, D/O late Rathna Naik, aged about 35 years, 6. Shanmukha Naik, son of late Rathna naik, aged about 34 years, 7. Khethavath Dhanunjaya, son of late Rathna naik, aged about 31 years,
All are Hindu, Agriculturist, residing at B.B Thanda village in Kudligi Taluk, Vijayanagra District.
…Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**
Whereas the above petitioners have instituted above petition to get the death certificate of their deceased petitioner No1&2's Mother the petitioner No.3's Mother in law and the petitioner no.4 to 7's grandMother by name Shanthi Bai wife of late Swami naik was died on 26/05/1968 B.B Thanda village in Kudligi Taluk, Vijayanagra District. on the file of the civil Judge& JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 08/01/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 31/08/2023

By Order of the court
Chief Ministerial
Officer Civil Judge J.D) Court kudligi

Devaraj Naik.T, Advocate, kudligi

**INTHE COURT OF THE CIVIL JUDGE AND J.M.F.C. AT KUDLIGI, Crl. Misc. No.1268/2023**
**Between:** 1. Nagya Naik, son of late swami Naik, aged about 69 years, 2. Shankra Naik, son of late swami Naik, aged about 46 years, 3. Smt. Sumangalamma, wife of late Rathna Naik, aged about 77 years, 4. Khethavath Devendra Naik, son of late Rathna Naik, aged about 37 years, 5. K.Lalitha bai, D/O late Rathna Naik, aged about 35 years, 6. Shanmukha Naik, son of late Rathna naik, aged about 34 years, 7. Khethavath Dhanunjaya, son of late Rathna naik, aged about 31 years,
All are Hindu, Agriculturist, residing at B.B Thanda village in Kudligi Taluk, Vijayanagra District.
…Petitioner And
The Tahasildar Kudligi …Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**
Whereas the above petitioners have instituted above petition to get the death certificate of their deceased petitioner No1&2's father the petitioner No.3's father in law and the petitioner no.4 to 7's grandfather by name Swami Naik son of late Dhanjya naik was died on 18/09/1993 B.B Thanda village in Kudligi Taluk, Vijayanagra District. on the file of the civil Judge& JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 08/01/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 28/11/2023

By Order of the court
Chief Ministerial
Officer Civil Judge J.D) Court kudligi

Devaraj Naik.T, Advocate, kudligi

## ಕವಿ ಮನಸು

### ಶ್ರೀ ವಿಷ್ಣು ಸ್ವರೂಪ ಶ್ರೀರಾಮ



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ
ಮನೋ ನಭದಲಿ ಶ್ರೀರಾಮ ಚಂದಿರ ।
ಶ್ರೀರಾಮ ನಾಮವ ನಿತ್ಯ ಪಠಿಸಲು
ನಮ್ಮಯ ಬಾಳು ದಿವ್ಯ ಸುಂದರ ॥

ರಘುಕುಲದಲ್ಲಿ ಜನಿಸಿದ ತಾನು
ಶ್ರೀದಶರಥ ಮುದ್ದಿನ ಮಗನಾಗಿ ।
ಕೌಶಲ್ಯಯ ಮಾತೆ ಮಡಿಲಲಿ ನಲಿದ
ದೈವಾಂಶವೇ ನಗುವ ಮಗುವಾಗಿ ॥

ಆದರ್ಶ ಪುರುಷ ನೀ ಸದಾಕಾಲಕೆ
ಅನನ್ಯ ಅಮೋಘ ನಿನ್ನಯ ಗುಣವು ।
ನಿನ್ನಯ ನಡೆ ನುಡಿ ಪ್ರಜ್ವಲ, ನಿರ್ಮಲ
ಮೂಕವಿಸ್ಮಿತ ವ್ಯೋಮಾ ಗಣವು ॥

ಪಾದವ ಸೋಕಿಸಿ ಪಾಪವ ಕಳೆದು
ಮಾತೆ ಅಹಲ್ಯೆಯನು ನೀ ರಕ್ಷಿಸಿದೆ ।
ಧರ್ಮದ ಉಳಿವಿಗೆ ದೀಕ್ಷೆಯ ತೊಟ್ಟು
ದುಷ್ಟರನು ನೀನೇ ಬಹು ಶಿಕ್ಷಿಸಿದೆ ॥

ಅಂತರ್ ಬಾಹ್ಯ ಅಂದ ಚಂದದಿ
ಅಪ್ರಮೇಯನು ನೀ ಶ್ರೀರಾಮ ।
ಇಹ-ಪರಲೋಕದಿ ಸಾಕ್ಷಾತ್ಕಾರಕೆ
ದಿವ್ಯ ಸ್ಪೂರ್ತಿಯು ನಿನ್ನ ನಾಮ ॥

ನೋವಲಿ ನಲಿವ ಕಾಣುವಭಾವ
ತಂದಿತು ನಿನ್ನಯ ಪ್ರಿಯನಾಮ ।
ನಲಿವಲೂ ನೋವ ರಮಿಸುವ ಶಕ್ತಿ
ನಮಗಿತ್ತವ ನೀ ತಾನೇ ಓ ಶಾಮ ॥


ನಿನ್ನ ನಾಮವ ಜಪಿಸಿ, ಸೇವೇಗೈದು
ಅಮರನಾಗಿರುವನು ಶ್ರೀ ಹನುಮ ।
ನಿನ್ನಾದರ್ಶವ ಅರಿತು ನಡೆದರೆ ಜನ
ಪರಮ ಪಾವನ ದಿಟ ನರ ಜನುಮ ॥

ನೀಹುಟ್ಟಿ ನಡೆದ ಈ ಭೂಮಿಯಲ್ಲಿ
ಪುಣ್ಯದ ಪರಿಮಳ ಕಣಕಣದಲ್ಲೂ ।
ಅಪ್ರತಿಮ ಅತೀತ ಕರುಣಾಮಯೀ
ನೀನೇ ರಾಮ ಪ್ರತಿ ಯುಗದಲ್ಲೂ ॥

ತೃಣ ಸಮಾನರು,ಅಲ್ಪರು ನಾವು
ಜೀವನ್ಮುಕ್ತಿಯ ನೀಡು ಪ್ರಭುವೇ ।
ಶ್ರೀವಿಷ್ಣು ಸ್ವರೂಪ ಶ್ರೀರಾಮ ನೇ
ನಿನ್ನ ದಿವ್ಯಪ್ರಭೆಯೊಳಿದೆ ಈ ಜಗವೆ ॥

– ಶಿವರಾಜ್. ವಿ
ಶಿಕ್ಷಕರು, ಹೊಸಪೇಟೆ.

## ತುಂಗಭದ್ರಾ ನೀರಿನ ಮಟ್ಟ



| ಶನಿವಾರ : 06-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.03 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.238ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1623.42 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8438 ಕ್ಯುಸೆಕ್ |
| ಸಾಮರ್ಥ್ಯ | 71.452 ಟಿಎಂಸಿ |

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಅಸಹಕಾರ, ಅವಮಾನಗಳ ನಡುವೆಯೂ ವೈರಿ ಪಡೆಗಳ ಹಿಡಿತಕ್ಕೆ ಸಿಲುಕದಂತೆ ಮೇಲಾಧಿಕಾರಿಗಳನ್ನು, ಸೈನಿಕರನ್ನು ರಕ್ಷಿಸಿದ

# ಕಾರ್ಗಿಲ್ ವನಿತೆ ಗುಂಜನ್ ಸಕ್ಸೇನಾ

ವಿಮಾನವನ್ನು ಹಾರಿಸಬೇಕು ಎಂಬ ಏಕೈಕ ಮಹದಾಕಾಂಕ್ಷೆ ಹೊಂದಿದ ಮಹಿಳೆಯೊಬ್ಬಳು ಪುರುಷ ಪ್ರಧಾನ ಮಿಲಿಟರಿ ವಾಯುಪಡೆ ಯೋಧರ ಗುಂಪಿನಲ್ಲಿ ಒಬ್ಬಳಾಗಿ ಸಾವಿರಾರು ಗಂಟೆಗಳ ಕಾಲ ಯುದ್ಧ ವಿಮಾನವನ್ನು ಹಾರಿಸಿದ ಭಾರತದ ಮೊದಲ ಪೈಲೆಟ್ ಲೆಫ್ಟಿನೆಂಟ್ ಗುಂಜನ್ ಸಕ್ಸೇನಾ. ಕಾರ್ಗಿಲ್ ಯುದ್ಧದಲ್ಲಿ ಮದ್ದು ಗುಂಡುಗಳ ಸಿಡಿತದ ನಡುವೆ ವೈರಿಗಳಿಂದ ಗಾಯಗೊಂಡ 900ಕ್ಕೂ ಹೆಚ್ಚು ಭಾರತೀಯ ಯೋಧರನ್ನು ರಕ್ಷಿಸುವಲ್ಲಿ ನಿರತಳಾದ ವೀರ ವನಿತೆ, 40ಕ್ಕೂ ಹೆಚ್ಚು ಬಾರಿ ತನ್ನ ಚೇತ ವಿಮಾನವನ್ನು ತುರ್ತು ಪರಿಸ್ಥಿತಿಗಳಲ್ಲಿ ಹಾರಿಸುತ್ತಾ ಯುದ್ಧ ದಲ್ಲಿ ಭಾಗಿಯಾದ ವೀರರಿಗೆ ಆಹಾರ ಮತ್ತು ಔಷಧಿಗಳನ್ನು ತಲುಪಿಸುವಲ್ಲಿ, ಗಾಯಗೊಂಡವರನ್ನು ರಕ್ಷಿಸುವಲ್ಲಿ ಮತ್ತು ವೈರಿ ಪಡೆಯವರು ನೆಲೆ ಮಾಡಿರುವ ಜಾಗಗಳನ್ನು ಗುರುತಿಸುವಲ್ಲಿ ಭಾರತೀಯ ಭೂಸೇನೆಯ ಯೋಧರ ಬೆನ್ನೆಲುಬಾಗಿ ತನ್ನ ಸ್ನೇಹಿತೆ ಕೇರಳ ರಾಜ್ಯದ ಇನ್ನೋರ್ವ ಫ್ಲೈಟ್ ಆಫೀಸರ್ ವಿದ್ಯಾ ರಾಜನರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿದ ಕಾರ್ಗಿಲ್ ವನಿತೆ ಎಂಬ ಹೆಸರನ್ನು ಪಡೆದ ವ್ಯಕ್ತಿ ಗುಂಜನ ಸಕ್ಸೇನ.

1975ರಲ್ಲಿ ಜನಿಸಿದ ಗುಂಜನ್ ಸಕ್ಸೇನಾ ತಂದೆ ಅನುಪ್ ಕುಮಾರ ಸಕ್ಸೇನಾ ಭೂಸೇನೆಯ ಲೆಫ್ಟಿನೆಂಟಾಗಿದ್ದರು. ತಾಯಿ ಗೃಹಿಣಿ. ಸಹೋದರ ಕೂಡ ಮುಂದೆ ಭೂಸೇನೆಯ ಲೆಫ್ಟಿನೆಂಟ್ ಆಗಿ ಕಾರ್ಯನಿರ್ವಹಿಸಿದನು. ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಗುಂಜನ್ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿ 10ನೇ ತರಗತಿ ಮತ್ತು ಪಿಯುಸಿ ಗಳಲ್ಲಿ ತೇರ್ಗಡೆಯಾದಳು. ಮುಂದೆ ದೆಹಲಿಯ ಹಂಸರಾಜ ಕಾಲೇಜಿನಲ್ಲಿ ಭೌತಶಾಸ್ತ್ರ ವಿಷಯದಲ್ಲಿ ಪದವಿ ಪಡೆದ ಗುಂಜನ್ ಆಕಾಶದಲ್ಲಿ ವಿಮಾನ ಹಾರಿಸುವ ಮಹತ್ತರ ಆಕಾಂಕ್ಷೆಯನ್ನು ಚಿಕ್ಕಂದಿನಿಂದಲೇ ಹೊಂದಿದ್ದಳು.

ಇದಕ್ಕೆ ಸರಿಯಾಗಿ ಭಾರತೀಯ ವಾಯು ಸೇನೆಯಲ್ಲಿ ಮೊಟ್ಟ ಮೊದಲ ಬಾರಿಗೆ ಮಹಿಳೆಯರಿಗೆ ಯುದ್ಧವಿಮಾನ ಚಲಾಯಿಸಲು ಅರ್ಜಿ ಸಲ್ಲಿಸಲು ಆಹ್ವಾನಿಸಲಾಯಿತು. ತಂದೆಯ ಬೆಂಬಲದಿಂದ ಅರ್ಜಿ ಸಲ್ಲಿಸಿದ ಗುಂಜನ್ ಎಲ್ಲ ಪ್ರಾರಂಭಿಕ ಪರೀಕ್ಷೆಗಳಲ್ಲಿ ಪಾಸಾದಳು.ಆದರೆ ವೈದ್ಯಕೀಯ ಪರೀಕ್ಷೆಯಲ್ಲಿ ಹೆಚ್ಚಿನ ತೂಕ ಮತ್ತು ನಿಗದಿತ ಮಾಪನಕಿಂತ ಒಂದು ಸೆಂಟಿಮೀಟರ್ ಕಡಿಮೆ ಎತ್ತರಗಳಲ್ಲಿ ನಪಾಸಾದಳು. ಅತ್ಯಂತ ನಿರಾಶಳಾದ ಗುಂಜನಳನ್ನು ಆಕೆಯ ತಂದೆ ಅನುಪ್ ಸಕ್ಸೇನಾ ಇನ್ನಿಲ್ಲದಂತೆ ಹುರಿದುಂಬಿಸಿದ ಪರಿಣಾಮವಾಗಿ ಕೇವಲ 15 ದಿನಗಳಲ್ಲಿ ಆಕೆ ತೂಕ ಇಳಿಸುವಲ್ಲಿ ಯಶಸ್ವಿಯಾದಳು, ಆದರೆ ಆಕೆಯ ಎತ್ತರ ನಿಗದಿತ ಎತ್ತರಕ್ಕೆ ಕೇವಲ ಒಂದು ಸೆಂಟಿಮೀಟರ್ ಕಡಿಮೆ ಇತ್ತು. ಆದರೆ ಆಕೆಯ ಕೈಗಳು ಮತ್ತು ಕಾಲ್ಗಳು ಅವಶ್ಯಕತೆಗಿಂತ ಒಂದುವರೆ ಸೆಂಟಿಮೀಟರ್ ಹೆಚ್ಚು ಉದ್ದವಿದ್ದ ಕಾರಣ ಆಕೆಗೆ ವಾಯುಪಡೆಯಲ್ಲಿ ಅವಕಾಶ ದೊರೆಯಿತು. ಮುಂದೆ ಆಕೆ ಉದಂಪುರ ಕ್ಯಾಂಪ್ನಲ್ಲಿ ಟ್ರೇನಿ ಪೈಲೆಟ್ ಆಫೀಸರ್ ಆಗಿ ಸೇರಿಕೊಂಡಳು.

ಮುಂದಿನದ್ದು ಹರಸಾಹಸ. ಪುರುಷ ಪಾರಮ್ಯದ ಸಮಾಜದಲ್ಲಿ ಮಹಿಳಾ ಟ್ರೇನಿಯಾಗಿ ಸೇರಿಕೊಂಡ ಈಕೆಗೆ ಪ್ರತ್ಯೇಕ ಕೋಣೆಯನ್ನೇನೂ ನೀಡಲಾಯಿತು. ಆದರೆ ಮಹಿಳೆಯರಿಗೆ ಬೇಕಾಗುವ ಯಾವುದೇ ರೀತಿಯ ವ್ಯವಸ್ಥೆಗಳು ಇಲ್ಲದ ಕೇವಲ ಪುರುಷರು ಮಾತ್ರ ಕಾರ್ಯನಿರ್ವಹಿಸುತ್ತಿದ್ದ ಆ ಸಮಯದಲ್ಲಿ





ವೀಣಾ ಹೇಮಂತಗೌಡ ಪಾಟೀಲ್,
ಮುಂಡರಗಿ, ಗದಗ

ಪ್ರತಿಯೊಂದು ಹೆಜ್ಜೆಗೂ ಆಕೆಗೆ ಅಡೆತಡೆಗಳು. ಮೊದಮೊದಲು ಆಕೆಯನ್ನು ಮಹಿಳೆ ಎಂಬ ಕಾರಣಕ್ಕೆ ನಿರ್ಲಕ್ಷಿಸಿದ, ಆಕೆಯ ಜೊತೆಗೆ ತರಬೇತಿ ಪಡೆಯಲು ನಿರಾಕರಿಸಿದ ಸಹೋದ್ಯೋಗಿಗಳ ಅಸಹಕಾರದಿಂದ ಬೇಸತ್ತ ಗುಂಜನ್ ಗೆ ಖುದ್ದು ಮೇಲಧಿಕಾರಿಗಳೇ ತರಬೇತಿ ನೀಡಿದರು. ಇದರ ಪರಿಣಾಮವಾಗಿ ಅತ್ಯಂತ ಕಡಿಮೆ ಸಮಯದಲ್ಲಿ ಆಕೆ ಯುದ್ಧ ವಿಮಾನ ಚಲಾಯಿಸುವ ಪರಿಣತಿಯನ್ನು ಗಳಿಸುವುದಲ್ಲದೆ ಕ್ಲಿಷ್ಟಕರ ಸಂದರ್ಭದಲ್ಲಿ ಲೀಲಾಜಾಲವಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದಳು.

ಇಷ್ಟಾದರೂ ಆಕೆಯೊಂದಿಗೆ ಸೋರ್ಟೀ(ನಿಗದಿತ ಸ್ಥಳದಿಂದ ಯುದ್ಧ ವಿಮಾನವನ್ನು ಚಲಾಯಿಸಿಕೊಂಡು ಅಪರಿಚಿತ ಸ್ಥಳದಲ್ಲಿ ಕೆಲ ಗಂಟೆಗಳ ಕಾಲ ವಿಮಾನ ಹಾರಾಡಿಸಿ ಮತ್ತೆ ಮರಳಿ ಬರುವ ತರಬೇತಿ) ತರಬೇತಿಗೆ ಯಾವ ಪುರುಷ ಸಹೋದ್ಯೋಗಿಗಳು ಸಾತ್ ನೀಡುತ್ತಿರಲಿಲ್ಲ. ಇದರ ಜೊತೆಗೆ ಆಕೆಗೆ ಸೆಲ್ಯೂಟ್ ಮಾಡಬೇಕಾಗುತ್ತದೆ ಎಂದು ಆಕೆಗಿಂತ ಕೆಳ ಹಂತದ ನೌಕರರು ಆಕೆಯನ್ನು ತಪ್ಪಿಸಿ ಓಡಾಡುತ್ತಿದ್ದರು ಇದು ಆಕೆಯ ಆತ್ಮಾಭಿಮಾನಕ್ಕೆ ಬಲವಾದ ಪೆಟ್ಟನ್ನು ನೀಡುತ್ತಿತ್ತು.

ಹೀಗೆ ಒಂದು ಬಾರಿ ಅತಿಯಾದ ನಿರಾಶೆಯನ್ನು ಅನುಭವಿಸಿದ ಗುಂಜನ್ ರಜೆ ಚೀಟಿಯನ್ನು ಬರೆದು ಪೋಸ್ಟ್ ಮಾಡಿ ಮನೆಗೆ ತೆರಳಿದಳು. ಆದರೆ ಆಕೆಗೆ ತರಬೇತಿ ನೀಡಿದ್ದ, ಆಕೆಯ ಸಾಮರ್ಥ್ಯ ಅರಿತಿದ್ದ ವಾಯುಪಡೆಯ ಮೇಲಧಿಕಾರಿ ಆಕೆಯ ರಜೆಯನ್ನು ತತ್ ಕ್ಷಣಕ್ಕೆ ರದ್ದುಗೊಳಿಸಿ, ತುರ್ತು ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಿದರು.

ಅದು 1999ರ ಸಮಯ. ಕಾರ್ಗಿಲ್ ಯುದ್ಧ ಘೋಷಣೆಯಾಗಿತ್ತು. ಭಾರತದ ಭೂಸೇನೆಯ ಜೊತೆ ವಾಯು ಸೇನೆಯು ಯುದ್ಧದಲ್ಲಿ ಕಾರ್ಯ ಪ್ರವೃತ್ತವಾದ ನಿಮಿತ್ತ ಗುಂಜನ್ ಳನ್ನು ಕೂಡ ಕಾಶ್ಮೀರದ ಶ್ರೀನಗರ ಕ್ಯಾಂಪ್ಗೆ ಕಳುಹಿಸಿಕೊಟ್ಟರು. ಅಲ್ಲಿಯೂ ಕೂಡ ಮಹಿಳೆ ಎಂಬ ಕಾರಣಕ್ಕೆ ಆಕೆಯನ್ನು ಮರಳಿ ಕಳುಹಿಸಲು ಭಾರತದ ಕೆಲ ಪಟ್ಟಭದ್ರ ಹಿತಾಸಕ್ತಿಗಳು ಪ್ರಯತ್ನಿಸಿದರು.

ಒಂದೊಮ್ಮೆ ಮೇಲಧಿಕಾರಿಗಳ ಆದೇಶವನ್ನು ಮೀರಿ ತುರ್ತು ಕರೆಯ ಮೇರೆಗೆ ಯುದ್ಧ ನಡೆಯುತ್ತಿದ್ದ ಕಣಿವೆಯಲ್ಲಿ ತನ್ನ ವಿಮಾನ ಚಲಾಯಿಸಿದ ಗುಂಜನ್ ಅಲ್ಲಿ ತನ್ನ ಮೇಲಧಿಕಾರಿಯನ್ನು ಮತ್ತಿತರ ಸೈನಿಕರನ್ನು ರಕ್ಷಿಸಿ ಅತ್ಯಂತ ಚಾಕಚಕ್ಯತೆಯಿಂದ ವೈರಿ ಪಡೆಗಳ ಹಿಡಿತಕ್ಕೆ ಸಿಲುಕದಂತೆ ತನ್ನ ವಾಹನವನ್ನು ಗಾಳಿಯಲ್ಲಿ ಉಡಾಯಿಸಿ ಸುರಕ್ಷಿತವಾಗಿ ಶ್ರೀನಗರ ಕ್ಯಾಂಪ್ ಗೆ ಮರಳಿದಳು. ಆಗ ಆಕೆಯ ಜೊತೆ ಕಾರ್ಯನಿರ್ವಹಿಸುತ್ತಿದ್ದ ಇನ್ನುಳಿದ 20 ವಾಯುಪಡೆಯ ಲೆಫ್ಟಿನೆಂಟ್ ಅಧಿಕಾರಿಗಳು ಆಕೆಯ ಸಾಹಸಮಯ ಉಡ್ಡಯನಕ್ಕೆ ಚಪ್ಪಾಳೆಯ ಮೂಲಕ ಗೌರವ ಸಲ್ಲಿಸಿ ಆಕೆಯನ್ನು ಸ್ವಾಗತಿಸಿದರು. ಇದು ಆಕೆಯ ಆತ್ಮ ಬಲ ಹೆಚ್ಚಿಸುವಲ್ಲಿ ಸಹಕಾರಿಯಾಯಿತು. ಮುಂದೆ ಸುಮಾರು 40ಕ್ಕೂ ಹೆಚ್ಚು ಬಾರಿ ಕಾರ್ಗಿಲ್ ಯುದ್ಧದಲ್ಲಿ ತನ್ನ ಚೀತಾ hawk ಹೆಲಿಕಾಪ್ಟರ್ ನ್ನು ಚಲಾಯಿಸಿದ ಗುಂಜನ್ ಭೂಸೇನೆಯ ಯೋಧರಿಗೆ ಅವಶ್ಯವಿದ್ದ ಆಹಾರವನ್ನು, ಔಷಧಿಗಳನ್ನು ತಲುಪಿಸುವಲ್ಲಿ ಸಹಾಯ ಮಾಡಿದಳು. ಇದರ ಜೊತೆ ಜೊತೆಗೆ ಗಾಯಗೊಂಡ ಸೈನಿಕರನ್ನು ಆಸ್ಪತ್ರೆ ತಲುಪಿಸುವಲ್ಲಿ ಮತ್ತು ವೈರಿ ಪಡೆಯ ನೆಲೆಗಳ ಸುಳಿವನ್ನು ಗುರುತಿಸುವಲ್ಲಿ ಭೂ ಸೇನೆಗೆ ನೆರವಾದಳು. ಕಾರ್ಗಿಲ್ ಯುದ್ಧದಲ್ಲಿ ಮೊಟ್ಟ ಮೊದಲ ಬಾರಿಗೆ ತನ್ನ ಸಹೋದ್ಯೋಗಿ ವಿದ್ಯಾ ರಾಜನರೊಂದಿಗೆ ಕಾರ್ಯನಿರ್ವಹಿಸಿದ ಗುಂಜನ್ ಸಕ್ಸೇನಾಳಿಗೆ ಉತ್ತರ ಪ್ರದೇಶ ರಾಜ್ಯ ಸರ್ಕಾರವು ಶೌರ್ಯ ವೀರ ಚಕ್ರವನ್ನು ನೀಡಿ ಗೌರವಿಸಿತು. 1996 ರಿಂದ 2004 ರವರೆಗೆ ಸುಮಾರು ಎಂಟು ವರ್ಷಗಳ ಅವಧಿಯವರೆಗೆ ವಾಯು ಸೇನೆಯ ಲೆಫ್ಟಿನೆಂಟ ಆಗಿ ಕಾರ್ಯನಿರ್ವಹಿಸಿದ ಗುಂಜನ್ ಸಕ್ಸೇನ 2004ರಲ್ಲಿ ಸೇವಾ ನಿವೃತ್ತಿ ಹೊಂದಿದರು. ವಾಯುಪಡೆಯ ವಿಂಗ್ ಕಮಾಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಗೌತಮ್ ನರೇನ್ ಅವರನ್ನು ಮದುವೆಯಾದ ಗುಂಜನ್ ಸಕ್ಸೇನ ಅವರು 2003ರಲ್ಲಿ ಮಗಳು ಪ್ರಜ್ಞಾಳಿಗೆ ಜನ್ಮವಿತ್ತಳು.

ವಿಮಾನ ಹಾರಿಸುವ ತನ್ನ ಮಹದಾಕಾಂಕ್ಷೆಯನ್ನು ಪ್ರಾಮಾಣಿಕತೆ, ನಿಷ್ಠೆ ಮತ್ತು ಶ್ರದ್ಧೆಯನ್ನು ಹೊಂದಿದ ಯೋಧಳಾಗಿ ಭಾರತ ಮಾತೆಯ ಹೆಮ್ಮೆಯ ಪುತ್ರಿಯಾದ ಗುಂಜನ್ ಸಕ್ಸೇನಾಳಂತಹ ಹೆಣ್ಣು ಮಕ್ಕಳು ಪ್ರತಿ ಮನೆಯಲ್ಲೂ ಹುಟ್ಟಲಿ ಎಂದು ಹಾರೈಸುವ

# ನೆನಪಿರಲಿ ನೀವು ಮಕ್ಕಳೊಂದಿಗೆ ಒಡನಾಡುತ್ತಿದ್ದೀರಿ–ವ್ಯವಹರಿಸಿತ್ತಿಲ್ಲ...!

ಒಂದು ಮಾತು "ಹೂವು ತಾನಾಗಿಯೇ ಅರಳುವುದು ಪ್ರಕೃತಿ" ಇದು ಸಹಜವಾದುದ್ದೇ ಆದರೆ ಅದನ್ನು ಒತ್ತಾಯ ಪೂರಕವಾಗಿ ಅರಳಿಸುವುದೂ ಇದೆ ವ್ಯವಹಾರಕ್ಕೆಂದು! ಇದು ವಿಕೃತಿ"ಯಲ್ಲದೆ ಮತ್ತೇನು? ಪಾಲಕರಾದ ನಾವು ಇಲ್ಲಿ ಮತ್ತೊಮ್ಮೆ ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೇನೆಂದರೆ, ಮಕ್ಕಳೆಂದರೆ ಯಾರು? ಈ ಮಕ್ಕಳು ಯಾರಿಗಾಗಿ? ನಮ್ಮ ಮಕ್ಕಳು ಏನನ್ನು ಕಲಿಯಬೇಕು? ಮತ್ತು ಅದನ್ನೇ ಏಕೆ ಕಲಿಯಬೇಕು? ಇಷ್ಟು ಅಂಶಗಳು ಪಾಲಕರಾದ ನಮಗೆ ಸ್ಪಷ್ಟವಾಗಿದ್ದರೆ ಸಾಕೆನಿಸುತ್ತದೆ.

ಮನುಷ್ಯರಾದ ನಮಗೆ ಪ್ರಕೃತಿ ಯಾವುದು ಮತ್ತು ವಿಕೃತಿ ಯಾವುದು? ಎಂಬುದನ್ನು ಅರಿಯಲು, ನಾನು ಏಕೆ ಈ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ ಎಂದರೆ, ಇತ್ತೀಚಿನ ದಶಕದಲ್ಲಿ ಕಲಿಕೆಯ ಮೂಲ ಆಶಯವೇ ಬೇರೆಯಾಗಿ ಹೋಗಿದೆ ಜೊತೆಗೆ ಕಲಿಕೆಯ ಪರಿಣಾಮವೂ ಸಹ ವ್ಯತಿರಿಕ್ತವಾಗಿಯೇ ಫಲವನ್ನು ನೀಡುತ್ತಿದೆ.

ಇದಕ್ಕೆ ನೇರನೇರವಾಗಿ ಇಂದಿನ ನಮ್ಮ ಜೀವನವನ್ನೇ ಕಾರಣ ಎನ್ನುವುದಾದರೆ. ಅದರಲ್ಲಿ, ನಾವು ಬದುಕುವ ರೀತಿಯು ಒಂದು ಕಡೆ ಕಾರಣವಾದರೆ, ಇನ್ನೊಂದಡೆ ನಾವು ನಮ್ಮ ಜೀವನವನ್ನು ದರ್ಶನಮಾಡುವ ಮಾರ್ಗವೂ ಬೇರೆಯಾಗಿದೆ. ನಮ್ಮ ನಿತ್ಯ ಮೂಲಭತವಾದ ಬೇಡಿಕೆಗಳ ಕೆಲ ಅಂಶಗಳು ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರೆ, ಮತ್ತೆ ಕೆಲವು ಅನಿವಾರ್ಯ ಅಂದುಕೊಂಡುರಿವ ಅಂಶಗಳು ಆ ಜಾಗೆಯನ್ನು ತುಂಬಿಕೊಳ್ಳುತ್ತಿವೆ.

ಇಂತಹ ಸನ್ನಿವೇಶದಲ್ಲಿ ನಾವು ನಮ್ಮ ಮಕ್ಕಳನ್ನು ಸಜ್ಜುಗೊಳಿಸಬೇಕಾದ ಅನಿವಾರ್ಯ ಮತ್ತು ಅವಶ್ಯಕ ಸಂದಿಗ್ದತೆಯಲ್ಲಿ ತೊಳಲಾಡುತಿದ್ದೇವೆ. ಪಾಲಕರಾದ ನಾವು ನಮಗೆ ಗೊತ್ತಿದ್ದೊ ಗೊತ್ತಿಲ್ಲದಯೊ ನಮ್ಮ ಮಕ್ಕಳನ್ನು ಒತ್ತಾಯಪೂರ್ವಕವಾಗಿ, ಸಮಾಜದ ತಳಬುಡವಿಲ್ಲದ ತಳಮಳಗಳಿಗೆ ನಮ್ಮ ಕರುಳ ಕುಡಿಗಳನ್ನು ತಳ್ಳುತ್ತಿದ್ದೇವೆ. ಸಮಾಜಮುಖಿಯಾಗಿ ಸಹಜವಾಗಿ ಅರಳಬೇಕಾದ ಅವರನ್ನು, ಒತ್ತಾಯಪೂರ್ವಕವಾಗಿ ಅರಳಿಸುವ ಪ್ರಯತ್ನ ಮಾಡುತ್ತಿದ್ದೇವೆ, ಎಲ್ಲವನ್ನು ಹಣದೊಂದಿಗೆ ಗುಣಿಸಿ ನೋಡುತ್ತಿದ್ದೇವೆ, ಪ್ರೀತಿ ಪ್ರೇಮಗಳೊಂದಿಗೆ ಒಡನಾಡಬೇಕಿದ್ದ ಕರುಳ ಕುಡಿಗಳೊಂದಿಗೆ, ವ್ಯವಹಾರಕ್ಕೆ ನಿಂತುಬಿಟ್ಟಿದ್ದೇವೆ ಅನಿಸುತ್ತಿಲ್ಲವೆ?.

ಅಂತಿಮವಾಗಿ, ನಾವು ನಮ್ಮ ಮಕ್ಕಳಿಗೆ ಏನು ಕಲಿಸುತ್ತಿದ್ದೇವೆ ಮತ್ತು ಏನನ್ನು ಕಲಿಸಬೇಕಾಗಿತ್ತು, ಎಂಬುದನ್ನು ಒಮ್ಮೆ ಯೋಚಿಸಿದರೆ ನಮಗೆ ಗೊತ್ತಾಗುತ್ತದೆ ನಾವು ಹಿಡಿದಿರುವ ದಾರಿ ಸರಿಯಲ್ಲ ಮತ್ತು ಇದರಿಂದ ಸಾಧಿಸುವುದು ಏನೂ ಇಲ್ಲ ಎಂದು ಅಲ್ಲವೆ?. ಅದಕ್ಕಾಗಿಯೇ ನಾವು ಹೇಳುತ್ತಿರುವುದು "ನೆನಪಿರಲಿ ನೀವು ನಿಮ್ಮ ಮಕ್ಕಳೊಂದಿಗೆ ಒಡನಾಡುತ್ತಿದ್ದೀರಿ ಹೊರತು –ವ್ಯವಹರಿಸಿತ್ತಿಲ್ಲ" ಎಂದು.

ಪ್ರಿಯ ಪಾಲಕರೆ, ನಿಮ್ಮ ಮಕ್ಕಳಿಗೆ ಎಲ್ಲವನ್ನೂ ದಾರೆ ಎರೆಯಲು ಸಿದ್ದವಾಗಿರುವ ನೀವು, ನಮಗೆ ಬಂದೊದಗಿದ ಕಷ್ಟ ನಮ್ಮ ಮಕ್ಕಳಿಗೆ ಬರುವುದು ಬೇಡ ಎನ್ನುವ ನೀವು, ನಮ್ಮ ಮಕ್ಕಳು ಇತರರ ಮಕ್ಕಳಿಗಿಂತ ಏನು ಕಮ್ಮಿಯಲ್ಲ ಎಂಬುವ ಹೆಮ್ಮೆಯ ಪಾಲಕರಾದ ನೀವು, ನಿಮ್ಮ ಮಗು ಕೇಳುವ ಮುನ್ನವೇ ಎಲ್ಲವನ್ನು ತಂದು ಗುಡ್ಡೆಹಾಕುವ ನೀವು, ಇವೆಲ್ಲವುಗಳ ಬದಲಿಗೆ ಬಯಸುವುದಾದರು ಏನು? ಎನ್ನುವ ಸ್ಪಷ್ಟತೆಯನ್ನು ಹೊಂದಿರುವುದೂ ಅಷ್ಟೆ ಮುಖ್ಯವಲ್ಲವೆ? ಅಥವಾ ಇಂತಹದೊಂದು ಕಲ್ಪನೆಯನ್ನಾದರು ಮಾಡಿಕೊಂಡಿದ್ದೀರಾ? ಹೌದು ಎನ್ನುವುದಾದರೆ ಅವು



ಏನಾಗಿರಬಹುದು ಎಂದು ಒಮ್ಮೆ ನಮ್ಮನ್ನ ನಾವೇ ಅವಲೋಕನ ಮಾಡಿಕೊಳ್ಳೊಣ.

ಪ್ರತಿಶತಃ ನೂರಕ್ಕೆ ತೊಂಬತ್ತಕ್ಕೂ ಅಧಿಕ ಅಂದುಕೊಂಡು ಬಿಡಿ, ನಮಗೆ



ಜಿ. ಶಿವಕುಮಾರ್ ಸೋಗಿ,
ಕಾರವಾರ, ಕೈಗಾ.
9008130204

ಕಂಡುಬರುವ ಅಂಶಗಳು ಎಂದರೆ ಮಗು ನೀನು ಏನೆ ಕೇಳು ಇಲ್ಲಾ ಎನ್ನುವುದಿಲ್ಲ, ಏನು ಬೇಕಾದರೂ ಮಾಡು ತೊಂದರೆ ಇಲ್ಲ ಆದರೆ ಹೆಚ್ಚು ಹೆಚ್ಚು ಅಂಕಗಳು ಬೇಕೆನ್ನುವುದು ಸಾಮಾನ್ಯ ಸಂಗತಿ ಅಲ್ಲವೆ? ಶೇಕಡ ಎಂಬತ್ತು ಬಹಳ ಕಡಮೆ ಆಯಿತು, ತೊಂಬತ್ತರ ಮೇಲೆ ನಾಲ್ಕೈದು ಅಂಕಗಳಾದರೆ ಒಂದು ಹಂತಕ್ಕೆ ಒಳ್ಳೆಯದು! ಎಂದು ಬಯಸುವ ನೀವು, ಕೇವಲ ಅಂಕಗಳಿಗಾಗಿ ನಿಮ್ಮ ಮಕ್ಕಳಿಗೆ ಎಲ್ಲಾ ಬಗೆಯ ಆಮಿಷಗಳನ್ನು ಒಡ್ಡುವ ನೀವು, ಅವರ ಇತಿ ಮಿತಿಗಳನ್ನು ಅರಿಯದೆ ಅವರ ಮೇಲೆ ಇನ್ನಿಲ್ಲದಂತೆ ಒತ್ತಡ ಹಾಕುವ ನೀವು, ಏಕೆ ಒಂದು ಬಾರಿ ನನ್ನ ಮಗನ/ಳ ಶಕ್ತಿ–ಸಾಮರ್ಥ್ಯಗಳೇನು? ಆಸಕ್ತಿ–ಅಭಿರುಚಿಗಳೇನು? ಆಸೆ–ಆಕಾಂಕ್ಷೆಗಳೇನು? ಅವರ ಒಲುವು–ಗೆಲವುಗಳೇನು? ಎಂದು ಏಕೆ ಯೋಚಿಸುವುದಿಲ್ಲ!

ಕೇವಲ ನೀವು ಅಂದುಕೊಂಡಿರುವಷ್ಟು ಅಂಕಗಳನ್ನು ಹೆಕ್ಕಿ ತರಲಿಲ್ಲ ಎನ್ನುವ ಕಾರಣಕ್ಕೆ ನಿಮ್ಮದೇ ಮಗುವನ್ನು ಇನ್ನಿಲ್ಲದಂತೆ ತಿರಸ್ಕಾರ ಮಾಡುವುದನ್ನು ಹೇಗೆ ಒಪ್ಪಿಕೊಳ್ಳಬೇಕು ಹೇಳಿ? ಇದು ಸಹ ಎಷ್ಟು ಸರಿ ಎಂದು ಒಪ್ಪಿಕೊಳ್ಳುತ್ತೀರಿ? ಇದರ ಹೊರತಾಗಿಯೂ, ಅವರಲ್ಲಿರುವ ಸಂಯಮ, ತಾಳ್ಮೆ, ತ್ಯಾಗ, ಪ್ರೇಮದಂತಹ ಗುಣಗಳನ್ನು ಏಕೆ ಗುರುತಿಸುವುದಿಲ್ಲ? ನಿಮ್ಮ ಪ್ರಕಾರ ಈ ಗುಣಗಳು ಕಲಿಯಲು ಯೋಗ್ಯವಲ್ಲವೆ? ಬುದ್ದಿವಂತ ಪಾಲಕ ಮಿತ್ರರಲ್ಲಿ ಇದು ನನ್ನ ನೇರ ಪ್ರಶ್ನೆ, ಈಗ ನೀವೆ ಹೇಳಿ ನಿಮ್ಮ ಮಕ್ಕಳೊಂದಿಗೆ ನೀವು ಮಾಡುತ್ತಿರುವುದು ವ್ಯವಹಾರವೂ? ಅಥವಾ ಒಡನಾಟವೂ? ಇದು ಒಡನಾಟವಾಗಿದ್ದರೆ ನೀವು ನಿಜವಾಗಲು ಹೆಮ್ಮೆಯ ಪಾಲಕರೆ, ಒಂದು ವೇಳೆ ವ್ಯವಹಾರದ ಘಾಟು ಬಂದರೆ ನಿಮ್ಮ ಮಕ್ಕಳ ಭವಿಷ್ಯ ನೀವೆ ಹಾಳು ಮಾಡಿದಂತೆ ಅಂದುಕೊಂಡುಬಿಡಿ ಅಷ್ಟೆ.

ಪ್ರಿಯ ಪಾಲಕರೆ, ನಿಮ್ಮ ಮಕ್ಕಳಿಗೆ ಎಲ್ಲವನ್ನೂ ದಾರೆ ಎರೆಯಲು ಸಿದ್ದವಾಗಿರುವ ನೀವು, ನಮಗೆ ಬಂದೊದಗಿದ ಕಷ್ಟ ನಮ್ಮ ಮಕ್ಕಳಿಗೆ ಬರುವುದು ಬೇಡ ಎನ್ನುವ ನೀವು, ನಮ್ಮ ಮಕ್ಕಳು ಇತರರ ಮಕ್ಕಳಿಗಿಂತ ಏನು ಕಮ್ಮಿಯಲ್ಲ ಎಂಬುವ ಹೆಮ್ಮೆಯ ಪಾಲಕರಾದ ನೀವು, ನಿಮ್ಮ ಮಗು ಕೇಳುವ ಮುನ್ನವೇ ಎಲ್ಲವನ್ನು ತಂದು ಗುಡ್ಡೆಹಾಕುವ ನೀವು ಇವೆಲ್ಲವುಗಳ ಬದಲಿಗೆ ಬಯಸುವುದಾದರು ಏನು? ಕೇವಲ ಅಂಕಗಳನ್ನೆ? ಇದರ ಹೊರತಾಗಿಯೂ, ಅವರಲ್ಲಿರುವ ಸಂಯಮ, ತಾಳ್ಮೆ, ತ್ಯಾಗ, ಪ್ರೇಮದಂತಹ ಗುಣಗಳನ್ನು ಏಕೆ ಗುರುತಿಸಲಾಗಲಿಲ್ಲ ಎಂಬುದನ್ನು ಒಮ್ಮೆಯಾದರು ಯೋಚಿಸಬೇಕಿತ್ತಲ್ಲವೆ?.

ಯಾರಿಗೆ ಗೊತ್ತು ನಿಮ್ಮ ಮಗುವಿನಲ್ಲೂ ಒಬ್ಬ ಸಚಿನ್ ತಂಡಲ್ಕೂರ್, ಒಬ್ಬಳು ಪೀ ಟಿ ಉಷಾ, ಒಬ್ಬ ಅಬ್ದುಲ್ ಕಲಾಂ. ಒಬ್ಬ ವಿಶ್ವನಾಥನ್ ಆನಂದ, ಒಬ್ಬಳು ಮೇರಿಕೋಮ್ ಮತ್ತೊಬ್ಬ ದ್ಯಾನ್ ಚಂದ್, ವಿಶ್ವೇಶ್ವರಯ್ಯ ಇರಬಹುದಲ್ಲವೆ? ಇವರೆಲ್ಲರೂ ತಮ್ಮ ಅನುಕೂಲಕ್ಕೆ ತಕ್ಕುದಾದಷ್ಟು ಓದಿಯೇ ಮುಂದೆ ಬಂದವರು ಎನ್ನುವುದರ ಜೊತೆ ಜೊತೆಗೆ, ಅವರಲ್ಲಿರುವ ಅನನ್ಯ ಉತ್ಸಾಹಕ್ಕೆ, ಸುಪ್ತವಾಗಿ ಅಡಗಿರುವ ಪ್ರತಿಭಗೆ, ಅವರಲ್ಲಿನ ಛಲಕ್ಕೆ, ಏನಾದರೂ ಸರಿಯೇ ನಾನು ಮಾಡಿಯೇ ಸರಿ ಎಂದು ಎದ್ದು ನಿಂತಾಗ ಅವರ ಪಾಲಕರಿಂದ, ಶಾಲೆಯ ಗುರುಗಳಿಂದ, ಸ್ನೇಹಿತರಿಂದ ಅವರುಗಳಿಗೆ ಸಿಕ್ಕ ಪ್ರೋತ್ಸಾಹ ಒಂದು ಕಡೆಯಾದರೆ, ಆ ಮಕ್ಕಳಲ್ಲಿನ ಈ ಗುಪ್ತಗಾಮಿನಿಯಂತೆ ಪ್ರವಹಿಸುತಿದ್ದ ಅಂಶಗಳನ್ನು ಪಾಲಕರಾದವರು ಬಹುಬೇಗನೆ ಅರ್ಥಮಾಡಿಕೊಂಡು, ಅದಕ್ಕೆ ಬೆಂಬಲವಾಗಿ ನಿಂತಿರುವುದೇ ಕಾರಣವಲ್ಲವೆ.

ಈಗ ನೀವೆ ಯೋಚಿಸಿ ಕೇವಲ ಅಂಕಗಳ ಹಿಂದೆ ಬಿದ್ದಿದ್ದರೆ ಈ ಮೇಲಿನ ಸಾದಕರಲ್ಲಿ ಅರ್ಧದಷ್ಟು ಜನರನ್ನು ನಾವು ಇಂದು ನೆನಪಿಡುವ ಔಚಿತ್ಯ ಇರುತ್ತಿರಲಿಲ್ಲವೇನೊ. ಆದರೆ ಅವರ ಪಾಲಕರಾಗಲಿ, ಪ್ರೇರಕರಾಗಲಿ ಆ ಮಕ್ಕಳೊಂದಿಗೆ ಕೇವಲ ವ್ಯವಹರಿಸಲಿಲ್ಲ, ಅವರು ಅವರ ಮಕ್ಕಳೊಂದಿಗೆ ಒಡನಾಡಿದರು, ಅವರೊಂದಿಗೆ ಒಡಗೂಡಿ ಅವರ ಇಷ್ಟ ಕಷ್ಟಗಳನ್ನು , ಶಕ್ತಿ ಸಾಮರ್ಥ್ಯಗಳನ್ನು, ಅವರ ಬಲಹೀನತೆಯನ್ನು ಬಯಕೆಯನ್ನು ಅರಿತುಕೊಂಡು ಅವರೊಂದಿಗೆ ಒಮ್ಮತದ ನಿರ್ಧಾರಕ್ಕೆ ಬಂದರು. ತನ್ಮೂಲಕ ಸಾಮಾನ್ಯ ಮಕ್ಕಳನ್ನೂ ಅಸಮಾನ್ಯ ಸಾಧಕರನ್ನಾಗಿ ಮಾಡಿದರು, ಸಾಧನೆಯ ಜೊತೆ ಜೊತೆಗೆ ಸಮಾಜಕ್ಕೆ ಕೊಡುಗೆಯನ್ನಾಗಿಸಿದರು.

ಹಾಗಾಗಿ ತಿಳಿದವರು ಹೇಳುತ್ತಾರೆ ಪಾಲಕರೇ " ನಿಮ್ಮ ಮಕ್ಕಳೊಂದಿಗಿನ ನಿಮ್ಮ ವರ್ತನೆ ಯಾವತ್ತೂ ವ್ಯವಹಾರವಾಗದಿರಲಿ, ಅವರೊಂದಿಗೆ ಹೆಚ್ಚು ಹೆಚ್ಚು ಒಡಗೂಡಿ–ಒಡನಾಡ" ಬೇಕು ಅಲ್ಲವೇ, ಒಮ್ಮೆ ಯೋಚಿಸಿ ಪಾಲಕರಾದ ನಮ್ಮ ವರ್ತನೆ ಮಕ್ಕಳೊಂದಿಗೆ ವ್ಯವಹಾರದಂತಿರಬೇಕೊ ಅಥವಾ ಒಡನಾಡಿಯಂತಿರಬೇಕೊ.



/freshiesicecreams

Pure delight in every bite. Savour the freshness of real fruit!

freshies
fruit icecreams

Visit us today!
#9, ISR Road, Beside KLS Hospital, Near Amedkar Circle, Hospete
Mob: 7036030603

Locate us:

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ e-paper
REACH EVERY WHERE NO BORDER




9448633038
www.hampitimes.com

COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

# ದುಶ್ಚಟಗಳಿಂದ ದೂರವಿರಿ

## ಕೊಟ್ಟೂರು ಸ್ವಾಮಿಮಠದ ಜಗದ್ಗುರು ಬಸವಲಿಂಗ ಮಹಾಸ್ವಾಮಿಗಳ ಹೇಳಿಕೆ



■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪ್ರತಿಯೊಬ್ಬರು ಗ್ರಾಮದಲ್ಲಿ 25 ದಿನಗಳ ಕಾಲ ಮದ್ಯಪಾನ ವರ್ಜಿಸಬೇಕು, ಸಂಪೂರ್ಣ ವರ್ಜಿಸಿದರೆ ಇನ್ನೂ ಒಳಿತು ಎಂದು ಹಾಲಕೆರೆ–ಹೊಸಪೇಟೆಯ ಕೊಟ್ಟೂರು ಸ್ವಾಮಿಮಠದ ಮುಪ್ಪಿನ ಬಸವಲಿಂಗ ಮಹಾ ಸ್ವಾಮಿಗಳು ತಿಳಿಸಿದರು,

ಅವರು ಸಮೀಪದ ಜಿ.ನಾಗಲಾಪುರ ಗ್ರಾಮದ ಶ್ರೀ ಗುರುಒಪ್ಪತ್ತೇಶ್ವರ ಸ್ವಾಮಿ ಮಠದ ಶ್ರೀ ನಿರಂಜನ ಪ್ರಭುದೇವರ ಚರಪಟ್ಟಾಧಿಕಾರ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಸಾನಿಧ್ಯವಹಿಸಿ ಮಾತನಾಡಿದರು.ಶೈಕ್ಷಣಿಕ ಹಾಗು ದಾಸೋಹದ ವಿಚಾರದಲ್ಲಿ ವೀರಶೈವ ಮಠಗಳ ಕೊಡುಗೆ ಅಪಾರವಾದುದು, ಮಠಗಳ ಪರಂಪರೆ ಜಾತಿ–ಮತಗಳನ್ನು ಮೀರಿರುವುದು ಎಂದರು. ಎಲ್ಲರು ಮದ್ಯಪಾನ ಹಾಗೂ ಧೂಮಪಾನಗಳಂತಹ ದುಶ್ಚಟಗಳಿಂದ ದೂರವಿದ್ದು ಉತ್ತಮ ಸಂಸ್ಕಾರ, ಸಂಸ್ಕೃತಿ ಹಾಗೂ ಆಚಾರ ವಿಚಾರಗಳನ್ನು ಅಳವಡಿಸಿ ಕೊಂಡು ಉತ್ತಮ ಜೀವನ ಸಾಗಿಸಬೇಕು ಎಂದು ಈ ಪಟ್ಟಾಧಿಕಾರ ಕಾರ್ಯಕ್ರಮದಲ್ಲಿ ಮಾರ್ಚ್ 1 ರಿಂದ ಪ್ರಾರಂಭವಾಗಿ 9 ದಿವಸಗಳ ಕಾಲ ಪುರಾಣ ಪ್ರವಚನ ಕಾರ್ಯಕ್ರಮ ಹಾಗೂ 13,14,15 ತಾರೀಖಿನಂದು ಮೂರು ದಿವಸ ಚರಪಟ್ಟಾಧಿಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ವಿಚಾರ ಗೋಷ್ಠಿ, ವಿಚಾರಸಂಕಿರಣ, ಮುತ್ತೈದೆಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪುರಾಣ ಪ್ರವಚನಗಳನ್ನು ಹಮ್ಮಿಕೊಳ್ಳಲಾಗುವುದು ಅಲ್ಲದೇ ಈ ಕಾರ್ಯಕ್ರಮಕ್ಕೆ ವಿವಿಧ ಮಠಾಧೀಶರು, ಗಣ್ಯವ್ಯಕ್ತಿಗಳು, ರಾಜಕೀಯ ಮುಖಂಡರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಶಾಸಕ ಕೆ.ನೇಮಿರಾಜ್ ನಾಯ್ಕ್ ಮಾತನಾಡಿ, ಪ್ರತಿಯೊಬ್ಬ ತಂದೆ ತಾಯಿಗಳು ಆಸ್ತಿ ಗಳಿಸದೆ, ತಮ್ಮ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕು ಹಾಗು ಮಕ್ಕಳಿಗೆ ಶಿಕ್ಷಣ, ಉತ್ತಮಸಂಸ್ಕಾರ ನೀಡಿ ಎಂದರು.ಅಲ್ಲದೇ ಜಾತಿ, ಧರ್ಮ, ಭೇದ ಮರೆತು ಹಾಗೂ ರಾಜಕೀಯ ಹೊರತುಪಡಿಸಿ ಹೋಬಳಿ ವ್ಯಾಪ್ತಿಯಲ್ಲಿ ಬರುವ 33 ಹಳ್ಳಿಗಳ ಜನರು ಭಾಗವಹಿಸಿ ಪ್ರತಿಯೊಬ್ಬರೂ ತನುಮನದಿಂದ ಪಟ್ಟಾಧಿಕಾರದ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.

ಮರಿಯಮ್ಮನಹಳ್ಳಿ, ಡಣಾಪುರ, ಗರಗ, ಗುಂಡಾ, ಗೊಲ್ಲರಹಳ್ಳಿ, ಚಿಲಕನಹಟ್ಟಿ, ಹಾರುವನಹಳ್ಳಿ, ಬ್ಯಾಲಕುಂದಿ, ದೇವಲಾಪುರ ಗ್ರಾಮಗಳ ಭಕ್ತರು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಂಧರ್ಭದಲ್ಲಿ ಒಪ್ಪತ್ತೇಶ್ವರ ಮಠದ ಶ್ರೀ ನಿರಂಜನ ಪ್ರಭು ದೇವರು, ವಸ್ತ್ರದ ಶಿವಶಂಕರಯ್ಯ, ಗಂಡಿ ಬಸವರಾಜ್, ಪಿ ಓಬಪ್ಪ, ಗರಗ ಪ್ರಕಾಶ್, ರಾಜಪ್ಪ, ಗುಂಡಾ ಸೋಮಣ್ಣ, ಸೋಮ್ಲನಾಯ್ಕ್, ನಂದೀಶ್ ಹಾಗೂ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.

# ದೇಹ, ಮನಸ್ಸು

## ಆರೋಗ್ಯವಾಗಿರಲು ಕ್ರೀಡೆ ಸಹಕಾರಿ



■ **ಹಂಪಿ ಟೈಮ್ಸ್ ಬಳ್ಳಾರಿ**

ಮಾನವನು ಸದಾ ಚಟುವಟಿಕೆಯಿಂದ ಇರಬೇಕೆಂದರೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸಮತೋಲನದಲ್ಲಿಸಿಕೊಳ್ಳಬೇಕು. ಅದಕ್ಕೆ ಕ್ರೀಡಾ ಚಟುವಟಿಕೆಗಳು ಅತ್ಯಂತ ಸಹಕಾರಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ಹೇಳಿದರು.

ನಗರದ ಜಿಮ್ಖಾನದಲ್ಲಿ ಜೆ.ಎಸ್.ಡಬ್ಲ್ಯೂ ಮತ್ತು ಜಿಮ್ಖಾನ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಜೆ.ಎಸ್.ಡಬ್ಲ್ಯೂ ಕಪ್ ಟೆನ್ನಿಸ್ ಪಂದಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ಜಿಮ್ಖಾನದ ಎಕ್ಸಿಕ್ಯೂಟಿವ್ ಕಮಿಟಿ ಸದಸ್ಯರಾದ ಕಾಂಡ್ರ ಸತೀಶ್ ಕುಮಾರ್ ಮಾತನಾಡಿ, ಈ ಪಂದ್ಯಾವಳಿಗೆ ಉತ್ತರ ಕರ್ನಾಟಕದ ಟೆನ್ನಿಸ್ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ, ಈ ಕ್ರೀಡೆಯಲ್ಲಿ 120 ಸಿಂಗಲ್ಸ್ ಆಟಗಾರರು ಮತ್ತು 140 ಡಬಲ್ಸ್ ಆಟಗಾರರು ಭಾಗವಹಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಪೊಲೀಸ್ ಜಿಮ್ಖಾನ ಅಧ್ಯಕ್ಷ ಕೆ.ಜಿತೇಂದ್ರ, ಕಾರ್ಯದರ್ಶಿ ಜಿಎಂ ರವಿರಾಜಶೇಖರ ರೆಡ್ಡಿ, ಜೆಎಸ್‌ಡಬ್ಲ್ಯೂ ಅಧ್ಯಕ್ಷ ಮುರುಗನ್, ಮುಖಂಡರಾದ ಉದಯ್ ಭಾಸ್ಕರ್, ಸುಬ್ರಮಣ್ಯ, ಸೂರ್ಯ ಪ್ರಕಾಶ್, ಗವಿ ಬಸವರಾಜ್, ರಾಘವೇಂದ್ರ.ಹೆಚ್.ಎಸ್., ಸೇರಿದಂತೆ ಇತರರಿದ್ದರು.

# ಒಗ್ಗಟ್ಟಿನ ಕೊರತೆ ಮೀಸಲಾತಿಗೆ ಹಿನ್ನಡೆ

## ಹರಿಹರ ಪೀಠದ ಪಂಚಮಸಾಲಿ ಸಂಘದ ರಾಜ್ಯ ಅಧ್ಯಕ್ಷ ಜಿ.ಪಿ ಪಾಟೀಲ್ ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು:**

ಪಂಚಮಸಾಲಿಯ ಎರಡು ಪೀಠಗಳು ಜಗದ್ಗುರುಗಳಿಂದ ಸೃಷ್ಠಿ ಆಗಿದ್ದಲ್ಲ, ಪ್ರತಿಷ್ಠೆ ಗೀಳಿಗೆ ಬಿದ್ದು, ಸಮಾಜದ ಕೆಲ ಮುಖಂಡರು 2 ಪೀಠಗಳನ್ನು ಸೃಷ್ಟಿಸಿದರು, ರಾಜ್ಯದಲ್ಲಿ ಪಂಚಮಸಾಲಿ ಸಮಾಜದ ಜನ್ರು ಬಹುಸಂಖ್ಯೆಯಲ್ಲಿದ್ದರು, ಒಗ್ಗಟ್ಟಿಲ್ಲದ ಕಾರಣ ಇಂದಿಗೂ ನಾವು 2ಎ ಮೀಸಲಾತಿ ಪಡೆಯಲಾಗುತ್ತಿಲ್ಲ, ಇದು ನಮ್ಮ ದುರ್ದೈವ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯ ಅಧ್ಯಕ್ಷ ಜಿ.ಪಿ ಪಾಟೀಲ್ ಬೇಸರ ವ್ಯಕ್ತಪಡಿಸಿದರು

ಹರಿಹರದ ಪಂಚಮಸಾಲಿ ಪೀಠವನ್ನು ಪಂಚದಾಸೋಹ ಪೀಠವನ್ನಾಗಿ ಸ್ಥಾಪಿಸುವ ಪರಿಕಲ್ಪನೆಯಲ್ಲಿ, ಜಗದ್ಗುರು ವಚನಾನಂದ ಸ್ವಾಮಿಗಳ ನೇತೃತ್ವದಲ್ಲಿ ಪಟ್ಟಣದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಶನಿವಾರ ಏರ್ಪಡಿಸಿದ್ದ ಭಕ್ತ ಮಹಾ ಕೋಟಿ ಸಂಚಿತ ನಿಧಿ ಸಂಗ್ರಹ, ಕಾರ್ಯಕ್ರಮದಲ್ಲಿ ಮಾತನಾಡಿದರು.

ಹರಿಹರದ, ಹರ ಪೀಠದ ಜಗದ್ಗುರುಗಳು ವಚನಾನಂದ ಸ್ವಾಮಿಗಳು 119 ವರ್ಷಗಳ ಇತಿಹಾಸ ಇರುವ ವೀರಶೈವ ಲಿಂಗಾಯತ ಮಹಾಸಭಾ ಎಲ್ಲಾ ವೀರಶೈವ ಲಿಂಗಾಯತ ಉಪಪಂಗಡಗಳಿಗೂ ಶ್ರಮಿಸುತ್ತಿದ್ದಾರೆ. ಈ ಬಗ್ಗೆ ಸಮಾಜದ ಬಂಧುಗಳು ದ್ವಂದ್ವಕ್ಕೀಡಾಗಬಾರದು, ಸಮಾಜದ ಭಕ್ತರಲ್ಲಿ ಪಂಚಮಸಾಲಿ ಸಮಾಜಕ್ಕೂ ಮತ್ತು ವೀರಶೈವ ಲಿಂಗಾಯತ ಮಹಾಸಭಾಕ್ಕೂ ಇರುವ ವ್ಯತ್ಯಾಸದ ಗೊಂದಲವನ್ನು ತಿಳಿಗೊಳಿಸಿದರು.

ಶ್ರೀ ಪೀಠದಲ್ಲಿ ನಿತ್ಯ ತ್ರಿವಿದ ಪೂಜೆ ನಡೆಯುತ್ತಿದ್ದು , ಜೊತೆಗೆ ಪೀಠದಲ್ಲಿ ಪಂಚದಾಸೋಹ ಸ್ಥಾಪಿಸಬೇಕೆಂಬ ಪರಿಕಲ್ಪನೆಯಲ್ಲಿ, ಪೀಠದ ಆಡಳಿತ ಮಂಡಳಿ 'ಭಕ್ತ ಮಹಾ ಕೋಟಿ ಸಂಚಿತ ನಿಧಿ"ಯಡಿ ಭಕ್ತರಲ್ಲಿ ಆರ್ಥಿಕ ನೆರವು ಬೇಡುತ್ತಿದೆ, ಶ್ರೀ ರಾಮನಿಗೆ ಸೇತುವೆ ಕಟ್ಟಲು ಅಳಿಲು ಸೇವೆ ಮಾಡಿದಂತೆ, ತಾವು ಪೀಠದ ಪ್ರಗತಿಗೆ ಅಳಿಲು ಸೇವೆ ಮಾಡಿದರೆ ಪೀಠ ಸದೃಢಗೊಳ್ಳುತ್ತದೆ ಎಂದರು.

ಹೊರಗಡೆ ಪ್ರಸ್ತುತ ಸಂಸ್ಕಾರಗಳು ಮಕ್ಕಳಲ್ಲಿ ಮರೆಯಾಗುತ್ತಿರುವುದು ಕಂಡುಬರುತ್ತಿದ್ದು, ಸಮಾಜದ ಮಕ್ಕಳನ್ನು ಪೀಠದಲ್ಲಿ ಸೇರಿಸುವ ಮೂಲಕ ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿ ಬೆಳಸಿ ಎಂದು ಹೇಳಿದರು.

ನಂತರ, ಪ್ರಸ್ತುತ ವರ್ಷ ಬರ ಇರುವ ನಿಮಿತ್ತ ಜನವರಿ 15–16 ರಂದು ಜರುಗುವ ಹರಿಹರದ ಪಂಚಮಸಾಲಿ ಪೀಠದ ಹರ ಜಾತ್ರೋತ್ಸವವನ್ನು ವಿಜೃಂಭಣೆಯಿಂದ ಮಾಡದೆ, ಧಾರ್ಮಿಕ ಕಾರ್ಯಕ್ರಮಗಳು ಮತ್ತು ಪೂಜೆಗಳಿಗೆ ಹಾಗೂ ಕುಂಬ ಮೇಳಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ, ಭಕ್ತಾದಿಗಳು ಪೀಠಕ್ಕೆಆಗಮಿಸಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕೆಂದರು.

ಪಂಚಮಸಾಲಿ ತಾಲೂಕು ಅಧ್ಯಕ್ಷ ಚಾಪಿ ಚಂದ್ರಪ್ಪ ತಾಲೂಕು ಘಟಕ ಪೀಠಕ್ಕೆ ನೀಡಿದ ಕೊಡುಗೆ ಮತ್ತು ಸೇವೆ ತಿಳಿಸಿ, ದಾನಿಗಳನ್ನು ಮತ್ತು ಸಂಘಟನೆ ಕಾರ್ಯಕರ್ತರನ್ನು ಸ್ಮರಿಸಿದರು.

ಪಂಚಮಸಾಲಿ ಸಂಘದ ಜಿಲ್ಲಾ ಅಧ್ಯಕ್ಷರು ಪ್ರಕಾಶ್ ಪಾಟೀಲ ಪ್ರಾಸ್ತಾವಿಕ ನುಡಿದರು, ಶ್ರೀ ಪೀಠದ ಆಡಳಿತಾಧಿಕಾರಿ ಡಾ.ರಾಜ್ ಕುಮಾರ್ ಪೀಠದ ಬೆಳವಣಿಗೆ ಮತ್ತು ಯೋಜನೆಯ ಕಾರ್ಯಗಳ ಬಗ್ಗೆ ಪ್ರಸ್ತಾಪಿಸಿದರು. ಬಳ್ಳಾರಿ–ವಿಜಯನಗರ ಉಭಯ ಜಿಲ್ಲೆಗಳ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ತಿಪ್ಪೇಸ್ವಾಮಿ ಸಮಾಜದ ಶ್ರೀಗಳ ಆಶೀರ್ವಾದವೇ ನನ್ನ ಅಧ್ಯಕ್ಷತೆಗೆ ಕಾರಣ ಎಂಬುದನ್ನು ಸ್ಮರಿಸಿದರು. ಸಮಾಜದ ಹಿರಿಯರಾದ ಬಾವಿ ಬೆಟ್ಟಪ್ಪ ಮಾತನಾಡಿದರು.

ಇದೇ ವೇಳೆ ಅನ್ನದಾಸೋಹಕ್ಕೆ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ತಿಪ್ಪೇಸ್ವಾಮಿ 1 ಲಕ್ಷ ರೂ, ಅಧ್ಯಕ್ಷ ಚಾವಿಚಂದ್ರಪ್ಪ 25 ಸಾವಿರ ರೂ. ಸೇರಿದಂತೆ ಸಮಾಜದ ಇತರೆ ಮುಖಂಡರು ದೇಣಿಗೆ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜದ ಜಿಲ್ಲಾ ಅಧ್ಯಕ್ಷೆ ವೀಣಾ ವಿವೇಕನಂದಗೌಡ, ಸಮಾಜದ ಮುಖಂಡರು ಖಾನಾವಳಿ ಶಿವಕುಮಾರ್, ಕಂದಗಲ್ಲು ನೀಲಕಂಠಪ್ಪ, ಅಶೋಕ್ ಎಂಜಿನಿಯರ್, ಕನ್ನಳ್ಳಿ ಮಂಜುನಾಥ ಗೌಡ ಸೇರಿದಂತೆ ಸಮಾಜದ ಅನೇಕ ಮುಖಂಡರು ಹಾಜರಿದ್ದರು. ಹಳ್ಳಿ ಆನಂದ, ಶಿಕ್ಷಕರು ನಿರ್ವಹಿಸಿದರು.

# ಜ.09 ಕ್ಕೆ ಖರೀದಿದಾರರ ಹಾಗು ಮಾರಾಟಗಾರರ ಸಮಾವೇಶ

■ **ಹಂಪಿ ಟೈಮ್ಸ್ ಬಳ್ಳಾರಿ**

ತೋಟಗಾರಿಕೆ ಇಲಾಖೆ ವತಿಯಿಂದ ಸಂಬಾರು ಪದಾರ್ಥಗಳ ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶವನ್ನು ಜ.09 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹೋಟೆಲ್ ರಾಯಲ್ ಪೋರ್ಟ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಜಿಪಂ ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಅವರು ತಿಳಿಸಿದ್ದಾರೆ.

ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿ, ಭಾರತೀಯ ಸಂಬಾರು ಮಂಡಳಿ ಕೊಚ್ಚಿನ್ ಹಾಗೂ ತೋಟಗಾರಿಕೆ ಇಲಾಖೆ ಬಳ್ಳಾರಿ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ.

ತೋಟಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವರು ಹಾಗೂ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಸ್.ಎಸ್. ಮಲ್ಲಿಕಾರ್ಜುನ ಅವರು ಉದ್ಘಾಟನೆ ಮಾಡುವರು.

ಯುವಜನ ಸಬಲೀಕರಣ, ಕ್ರೀಡಾ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಅಧ್ಯಕ್ಷತೆ ವಹಿಸುವರು.

ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಈ.ತುಕಾರಾಂ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ್, ನಾರಾ ಭರತ್ ರೆಡ್ಡಿ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ್, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಉಪಮಹಾಪೌರರಾದ ಬಿ.ಜಾನಕಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿಗಳಾದ ಡಾ.ಶಮ್ಲಾ ಇಕ್ಬಾಲ್, ಬೆಂಗಳೂರು ಲಾಲ್‌ಬಾಗ್ ತೋಟಗಾರಿಕೆ ನಿರ್ದೇಶಕರಾದ ರಮೇಶ್.ಡಿ.ಎಸ್., ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಕೇರಳದ ಕೊಚ್ಚಿನ್‌ನ ಭಾರತೀಯ ಸಂಬಾರು ಮಂಡಳಿಯ ಕಾರ್ಯದರ್ಶಿ ಡಿ.ಸತ್ಯನ್, ಸಂಬಾರು ಮಂಡಳಿಯ (ಸಂಶೋಧನೆ ಹಾಗೂ ಆರ್ಥಿಕ) ನಿರ್ದೇಶಕ ಡಾ.ಎ.ಬಿ.ರೇಮಶ್ರೀ, ಭಾರತೀಯ ಸಂಬಾರು ಮಂಡಳಿಯ (ಮಾರುಕಟ್ಟೆ) ನಿರ್ದೇಶಕ ಬಿ.ಎನ್.ಜ್ಹಾ, ಭಾರತೀಯ ಸಂಬಾರು ಮಂಡಳಿಯ (ಅಭಿವೃದ್ಧಿ) ನಿರ್ದೇಶಕ ಧರಮೇಂದರ್ ದಾಸ್, ಕಲಬುರಗಿಯ ವಿಭಾಗ ತೋಟಗಾರಿಕೆ ಜಂಟಿ ನಿರ್ದೇಶಕ ಮಂಜುನಾಥ ನಾರಾಯಣಪುರ, ಬೆಂಗಳೂರು ಲಾಲ್‌ಬಾಗ್ ತೋಟಗಾರಿಕೆ ಜಂಟಿ ನಿರ್ದೇಶಕ (ತರಕಾರಿ ವಿಭಾಗ) ಡಾ.ಧನರಾಜ, ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಸಸ್ಯರೋಗ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಸಿ.ಜಿ.ಯಾದವ್, ಭಾರತೀಯ ಸಂಬಾರು ಮಂಡಳಿಯ (ಮಾರುಕಟ್ಟೆ) ಉಪನಿರ್ದೇಶಕ ಎಂ.ಮಣಿಕಂದನ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಇಲಾಖೆಯ ವಿಶ್ವೇಶ್ವರಯ್ಯ ಟ್ರೇಡ್ ಪ್ರೊಮೋಶನ್ ಸೆಂಟರ್‌ನ ಉಪನಿರ್ದೇಶಕ ಮನಸೂರ, ಸಕಲೇಶಪುರ ಭಾರತೀಯ ಸಂಬಾರು ಮಂಡಳಿಯ ಉಪನಿರ್ದೇಶಕ ಎಂ.ವೈ.ಹೊನ್ನೂರ, ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್.ಗಿರೀಶ್, ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿ (ಅಭಿವೃದ್ಧಿ ಸಂಸ್ಕರಣೆ ಮತ್ತು ಹೆಚ್‌ಆರ್‌ಡಿ) ಪ್ರಧಾನ ವ್ಯವಸ್ಥಾಪಕ ಸಿದ್ಧರಾಮಯ್ಯ ಎಂ.ಬರಗಿಮಠ, ಜಿಪಂ ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಸೇರಿದಂತೆ ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿಯ ಆಡಳಿತ ಮಂಡಳಿಯ ಸರ್ವ ಸದಸ್ಯರು, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿರುವರು ಎಂದು ಜಿಪಂ ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಅವರು ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಹುದ್ದೆಯಆಯ್ಕೆ ಪಟ್ಟಿಗೆಆಕ್ಷೇಪಣೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವಿಜಯನಗರ ಜಿಲ್ಲೆಗೆ ಹೊಸದಾಗಿ ಮಂಜೂರಾಗಿರುವ ಜಿಲ್ಲಾ ಸಂಯೋಜಕರು (ಆರ್.ಕೆ.ಎಸ್.ಕೆ) ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಈ ಹುದ್ದೆಯ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಕಾಯ್ದಿರಿಸಿದ ಆಯ್ಕೆ ಪಟ್ಟಿಯನ್ನು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಈ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಯಾವುದಾದರು ಆಕ್ಷಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಜ.12ರ ಸಂಜೆ 5.30 ರೊಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತರೂಪದಲ್ಲಿ ಆಕ್ಷಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕಟುಂಬ ಕಲ್ಯಾಣ ಸಂಘದ ಉಪಾಧ್ಯಕ್ಷ ಡಾ. ಎಲ್.ಆರ್.ಶಂಕರ್ ನಾಯಕ್ ತಿಳಿಸಿದ್ದಾರೆ.

### ಶಿಕ್ಷಕಿ ಸುರೇಖಾ ಕೆ ನಿಧನ



**ಹೊಸಪೇಟೆ:** ನಗರದ ಭಾರತಿನಗರದ ನಿವಾಸಿ ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಸುರೇಖಾ ಕಲ್ಲಿಕೇರಿ(45) ಇವರು ಅನಾರೋಗ್ಯದಿಂದಾಗಿ ಶುಕ್ರವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರಿಗೆ ಪತಿ ಚಂದ್ರಶೇಖರಗೌಡ್ರು ಮರಿಗೌಡ್ರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ. ಮೃತರ ಅಂತ್ಯಕ್ರಿಯೆ ನಗರದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಶನಿವಾರ ಜರುಗಿತು.

# ಸಾರ್ವಜನಿಕರ ಆಸ್ತಿ

ಮೊದಲ ಪುಟದಿಂದ

ಗ್ರಂಥಾಲಯಕ್ಕೆ ವಿಜಯನಗರ ಜಿಲ್ಲಾಡಳಿತವು ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ 5 ಲಕ್ಷ ರೂಪಾಯಿಗಳ ಸ್ಪರ್ಧಾತ್ಮಕ ಪುಸ್ತಕಗಳನ್ನು ನೀಡಿ ಅನುಕೂಲ ಮಾಡಿಕೊಟ್ಟಿದ್ದು, ಇದರ ಉಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಕನ್ನಡ ವಿಶ್ವವಿದ್ಯಾಲಯವು ಇಂದಿಗೆ ಸ್ಥಾಪನೆಗೊಂಡು 33 ವರ್ಷಗಳ ವಸಂತದಲ್ಲಿದೆ, ಕನ್ನಡ ವಿಶ್ವವಿದ್ಯಾಲಯವನ್ನು ಎಲ್ಲಾ ಕುಲಪತಿಗಳು, ಕುಲಸಚಿವರು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗಳು ಕಟ್ಟಿ ಬೆಳೆಸಿದ್ದಾರೆ. ಇನ್ನು ಕನ್ನಡ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದು, ಸೌಲಭ್ಯದ ಕೊರತೆ ಕಾಣುತ್ತಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚಿನ ಸೌಲಭ್ಯವನ್ನು ಒದಗಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ ಅವರು ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ಜೆ.ಎಸ್ ನಂಜಯ್ಯನವರ, ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು ಪ್ರಾಧ್ಯಾಪಕರು ಆಡಳಿತ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಅಕ್ಷರ ಗ್ರಂಥಾಲಯದ ಮುಖ್ಯ ಗ್ರಂಥಪಾಲಕರಾದ ಡಾ. ಎಂ.ಸಿ. ಗುಡಿಮನಿ ಅವರು ಕಾರ್ಯಕ್ರಮವನ್ನು ನಿರೂಪಿಸಿ ಹಾಗೂ ವಂದಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA